# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಶುಕ್ರವಾರ, ಜೂನ್ 07, 2024

ಸಂಪುಟ : 51 ಸಂಚಿಕೆ : 24 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com





## ವಾಲ್ಮೀಕಿ ನಿಗಮದ ಹಗರಣ : ಸಚಿವ ನಾಗೇಂದ್ರಗೆ ತಲೆದಂಡ



ಬೆಂಗಳೂರು, ಜೂ. 6 - ಭ್ರಷ್ಟಾಚಾರ ಹಗರಣಕ್ಕೆ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ ಸಂಪುಟದ ಸಚಿವ ಬಿ. ನಾಗೇಂದ್ರ ಅವರ ತಲೆದಂಡವಾಗಿದೆ. ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ದುರ್ಬಳಕೆಗೆ ಸಂಬಂಧಿಸಿದಂತೆ ಸಿಬಿಐ ಆರೋಪಟ್ಟಿ ಸಲ್ಲಿಸುತ್ತಿದ್ದಂತೆ, ನಾಗೇಂದ್ರ ಮುಖ್ಯ ಮಂತ್ರಿ ಅವರನ್ನು ಕಾವೇರಿ ನಿವಾಸದಲ್ಲಿ ಭೇಟಿ ಮಾಡಿ ರಾಜೀನಾಮೆ ಸಲ್ಲಿಸಿದ್ದಾರೆ. ಅವರ (2ನೇ ಪುಟಕ್ಕೆ)

## ಪರಿಷತ್ ಚುನಾವಣೆ : ಮೈತ್ರಿ ಅಭ್ಯರ್ಥಿಗಳಿಗೆ ಗೆಲುವು

ಬೆಂಗಳೂರು, ಜೂ. 6 – ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿಗಳು ಜಯ ಸಾಧಿಸಿದ್ದಾರೆ. ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿ - ಜೆಡಿಎಸ್ (2ನೇ ಪುಟಕ್ಕೆ)

## ನೀಟ್: ಹೆಚ್ಚುವರಿ ಅಂಕಗಳ ಬಗ್ಗೆ ಎನ್.ಟಿ.ಎ. ಸ್ಪಷ್ಟನೆ


ನವದೆಹಲಿ, ಜೂ. 6 – ವೈದ್ಯಕೀಯ ಪ್ರವೇಶಕ್ಕಾಗಿ ನಡೆಸುವ ನೀಟ್ ಪರೀಕ್ಷೆಯಲ್ಲಿ ಅಂಕಗಳು ಅತಿಯಾಗಿರುವ ಬಗ್ಗೆ ಹಲವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈ ಬಾರಿಯ ಪರೀಕ್ಷೆಯಲ್ಲಿ 67 ಅಭ್ಯರ್ಥಿಗಳು ಮೊದಲ ಸ್ಥಾನ ಪಡೆದಿದ್ದಾರೆ.

ಅಲ್ಲದೇ, ಅಂಕ ನೀಡಿಕೆಯಲ್ಲಿ ವ್ಯತ್ಯಾಸವಾಗಿದೆ ಎಂಬ ಆಕ್ಷೇಪಗಳೂ ಕೇಳಿ ಬಂದಿವೆ. ಈ ಬಗ್ಗೆ ಸ್ಪಷ್ಟನೆ ನೀಡಿರುವ ನೀಟ್ ಪರೀಕ್ಷೆ ನಡೆಸುವ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್.ಟಿ.ಎ), ಪರೀಕ್ಷಾ ಕೇಂದ್ರಗಳಲ್ಲಿ ಸಮಯ ಕಳೆದು ಕೊಂಡ (2ನೇ ಪುಟಕ್ಕೆ)












# ಬಿತ್ತನೆ ಬೀಜ ಕಂಪನಿಗಳಿಗೆ ವಂಚನೆ ; ವರ್ತಕ ಪರಾರಿ



**ಜಗಳೂರು**

ಜಗಳೂರು, ಜೂ.6- ಪಟ್ಟಣದಲ್ಲಿ ಬಿತ್ತನೆ ಬೀಜ ಮಾರಾಟದ ಅಂಗಡಿ ಮಾಲೀಕ ಬೀಜ ಮಾರಾಟದ 20ಕ್ಕೂ ಹೆಚ್ಚು ಕಂಪನಿಗಳಿಗೆ ಕೋಟ್ಯಂತರ ರೂಪಾಯಿ ವಂಚಿಸಿ ನಾಪತ್ತೆಯಾಗಿರುವ ಪ್ರಕರಣ ನಡೆದಿದೆ.

ಪಟ್ಟಣದ ದಾವಣಗೆರೆ ರಸ್ತೆಯಲ್ಲಿ' ಕಿಸಾನ್ ಆಗ್ರೋ' ಹೆಸರಿನಲ್ಲಿ ಬೀಜ ಮತ್ತು ಗೊಬ್ಬರ ವ್ಯಾಪಾರ ನಡೆಸುತ್ತಿದ್ದ ಹೊರ ರಾಜ್ಯ ಮೂಲದ ಕುಮಾರ್ ಗೌಡ ಎಂಬ ಹೆಸರಿನ ವ್ಯಕ್ತಿ ವಿವಿಧ ಬೀಜ ಕಂಪನಿಗಳ ವಿತರಕರಿಗೆ ಕೋಟಿಗಟ್ಟಲೆ ವಂಚನೆ ಮಾಡಿ ಪರಾರಿಯಾಗಿದ್ದಾನೆ.

ಮುಂಗಾರು ಹಂಗಾಮಿನಲ್ಲಿ ಬಿತ್ತನೆ ಬೀಜ ಮಾರಾಟ ಮಾಡುವ ಉದ್ದೇಶದಿಂದ ಇಲ್ಲಿನ ಮರೇನಹಳ್ಳಿ ರಸ್ತೆಯ ಲೋಕೋಪಯೋಗಿ ಕಚೇರಿ ಎದುರಿನ ಜೋತಿಪುರ ಪಕೀರ್ ಸಾಬ್ ಎಂಬುವವರಿಗೆ ಸೇರಿದ ವಾಣಿಜ್ಯ ಕಟ್ಟಡವನ್ನು ಬಾಡಿಗೆ ಪಡೆದಿದ್ದನು. ಪಯೋನಿಯರ್, ಕಾವೇರಿ, ರಾಶಿ, ಡಿಕೆಶಿ, ಅಡ್ವಾಂಟ, ಲಕ್ಷ್ಮೀ ಸೀಡ್ಸ್, ವಿ.ಎನ್. ಆರ್, ಮುಂತಾದ 20ಕ್ಕೂ ಹೆಚ್ಚು ಕಂಪನಿಗಳ ಬಿತ್ತನೆ ಬೀಜ ಮತ್ತು ಕೀಟನಾಶಕಗಳನ್ನು ಐದಾರು ದಿನಗಳಿಂದ ಮಾರುಕಟ್ಟೆ ಬೆಲೆಗಿಂತ ಅರ್ಧದಷ್ಟು ಕಡಿಮೆ ಬೆಲೆಗೆ ತರಾತುರಿಯಲ್ಲಿ ಮಾರಾಟ ಮಾಡಿ ನಾಪತ್ತೆಯಾಗಿದ್ದಾನೆ.

ಪೂರೈಕೆ ಮಾಡಿದ್ದ ಕಂಪನಿಗಳಿಗೆ ಕೊಡದೆ ರಾತ್ರೋರಾತ್ರಿ ಪಟ್ಟಣದಿಂದ ಪರಾರಿಯಾಗಿದ್ದು, ಆತಂಕಗೊಂಡ ವಿತರಕರು, ಕಂಪನಿ ಉದ್ಯೋಗಿಗಳು ಪೊಲೀಸರ ಮೊರೆ ಹೋಗಿದ್ದಾರೆ.

ಜಗಳೂರಿನಲ್ಲಿ ಬೀಜ ಮಾರಾಟ ಮಾಡುವ ಕುಮಾರ್ ಗೌಡ ಎಂಬ ವ್ಯಕ್ತಿಗೆ 1.75 ಕೋಟಿ ವೆಚ್ಚದ ಬಿತ್ತನೆ ಬೀಜ ಕೊಟ್ಟಿದ್ದೇನೆ. ನನಗೆ ಕೇವಲ ರೂ.35 ಲಕ್ಷ ಇವನು ಕೊಟ್ಟಿದ್ದು, ಉಳಿದ ಹಣ ಕೊಡುತ್ತೇನೆ ಎಂದು ಭರವಸೆ ನೀಡಿದ್ದ. ಆದರೆ ಈಗ ಮೋಸ ಮಾಡಿ ಓಡಿ ಹೋಗಿದ್ದಾನೆ. ಅವನ ಮೂಲದ ಬಗ್ಗೆ ಹೆಚ್ಚು ತಿಳಿದಿಲ್ಲ. ನಕಲಿ ಆಧಾರದ ಕಾರ್ಡ್ ಕೊಟ್ಟು ನಮಗೆ ದಿಕ್ಕು ತಪ್ಪಿಸಿದ್ದಾನೆ. ನನಗೆ ಕನಿಷ್ಟ ರೂ.1ಕೋಟಿಗೂ ಹೆಚ್ಚು ವಂಚಿಸಿದ್ದಾನೆ' ಎಂದು ದಾವಣಗೆರೆ ಮೂಲದ ವಿತರಕ ಶಿವಮೂರ್ತಿ ತಿಳಿಸಿದರು.

**ನಕಲಿ ಆಧಾರ್ ಕಾರ್ಡ್, ನಕಲಿ ಲೈಸೆನ್ಸ್ ನೀಡಿ ವಂಚನೆ :** ಬೀಜ ಕಂಪನಿಗಳಿಗೆ ಪಂಗನಾಮ ಹಾಕಿ ಪರಾರಿಯಾಗಿರುವ ವ್ಯಕ್ತಿಯ ನಿಜವಾದ ಹೆಸರು ಏನು ಎನ್ನುವುದು ಯಾರಿಗೂ ಮಾಹಿತಿ ಇಲ್ಲ. ನಾಲ್ಕೈದು ಆಧಾರ್ ಕಾರ್ಡ್ ಗಳನ್ನು ಮಾಡಿಸಿಕೊಂಡಿದ್ದ ವಂಚಕ, ಕುಮಾರ್ ಗೌಡ, ನಿಖಿಲ್ , ಸಂತೋಷ್ ಮುಂತಾದ ಹೆಸರುಗಳಲ್ಲಿ ವಿವಿಧ ಜಿಲ್ಲೆಗಳ ವರ್ತಕರು, ವಿತರಕರೊಂದಿಗೆ ವ್ಯವಹರಿಸುತ್ತಿದ್ದ. ಸಮೀಪದ ಉದ್ದಗಟ್ಟ ಗ್ರಾಮದ ರುದ್ರೇಶ್ ಎಂಬ ರೈತನ ಹೆಸರಿನಲ್ಲಿ ಬಿತ್ತನೆ ಬೀಜ ಮಾರಾಟ ಲೈಸೆನ್ಸ್ ಪಡೆದಿದ್ದ. ಈ ಹಿಂದೆ ಆಂಧ್ರಪ್ರದೇಶ ಮುಂತಾದ ರಾಜ್ಯಗಳಲ್ಲಿ ಹಲವು ವಂಚನೆ ಪ್ರಕರಣಗಳು ಈತನ ವಿರುದ್ಧ ದಾಖಲಾಗಿವೆ ಎಂದುಹೇಳಲಾಗುತ್ತಿದೆ.

ಕಂಪನಿಗಳಿಗೆ ಮೋಸ ಮಾಡಿ ಪರಾರಿಯಾದ ಘಟನೆ ತಿಳಿಯುತ್ತಿದ್ದಂತೆ ಮರೇನಹಳ್ಳಿ ರಸ್ತೆಯಲ್ಲಿರುವ ಮಳಿಗೆಗೆ ಸಾರ್ವಜನಿಕರು, ರೈತರು, ವರ್ತಕರು, ವಿತರಕರು ಜಮಾಯಿಸಿದ್ದರು. ಪೊಲೀಸರು ರಾತ್ರಿ ಸಮಯದಲ್ಲಿ ಮಳಿಗೆ ತೆರೆದು ಮಾರಾಟವಾಗದೇ ಉಳಿದಿರುವ ಬಿತ್ತನೆ ಬೀಜ ಮತ್ತು ಕೀಟನಾಶಕಗಳನ್ನು ವಿವಿಧ ಕಂಪನಿಯ ವಿತರಕರಿಗೆ ತೆಗೆದುಕೊಂಡು ಹೋಗಲು ಅವಕಾಶ ಕಲ್ಪಿಸಿದರು.

ವಂಚನೆ ಘಟನೆ ಬಗ್ಗೆ 17 ವಿತರಕರು, ಬೀಜ ಕೊಟ್ಟಿರುವವರು ಓಡಿ ಹೋಗಿರುವ ವ್ಯಕ್ತಿಯ ವಿರುದ್ಧ ಕೇವಲ ದೂರು ಅರ್ಜಿ ನೀಡಿದ್ದಾರೆ. ರೈತರಿಗೆ ಯಾವುದೇ ವಂಚನೆಯಾಗಿಲ್ಲ. ವಂಚನೆ ಘಟನೆ ಬಗ್ಗೆ ಯಾವುದೇ ಮೊಕದ್ದಮೆ ದಾಖಲಾಗಿಲ್ಲ' ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

# ಮಳೆ : ಮನೆಗಳಿಗೆ ನುಗ್ಗಿದ ಚರಂಡಿ ನೀರು - ಜನರ ಆಕ್ರೋಶ

**ಹರಿಹರ**

ಹರಿಹರ, ಜೂ.6- ನಗರದಲ್ಲಿ ಇಂದು ಸಂಜೆ ಧಾರಾಕಾರವಾಗಿ ಸುರಿದ ಮಳೆಯಿಂದಾಗಿ 30 ನೇ ವಾರ್ಡ್ ವಿದ್ಯಾನಗರ ಸಿ ಬ್ಲಾಕ್ 4 ಕ್ರಾಸ್ ನಲ್ಲಿ ಚರಂಡಿ ಕಾಮಗಾರಿ ಅರ್ಧಕ್ಕೆ ನಿಲ್ಲಿಸಿದ ಪರಿಣಾಮ ಚರಂಡಿ ನೀರು ಮನೆಗಳಿಗೆ ನುಗ್ಗಿದ್ದರಿಂದ, ಸ್ಥಳೀಯ ನಿವಾಸಿಗಳು ನಗರಸಭೆಯ ಸದಸ್ಯರು ಮತ್ತು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಶಿವನಗೌಡ ಅವರು, ವಿದ್ಯಾನಗರದ ಸಿ ಬ್ಲಾಕ್ 4 ಕ್ರಾಸ್ ನಲ್ಲಿ ಇರುವ ಚರಂಡಿಗೆ ಇಂದ್ರಾನಗರ, ಸರ್ಕಾರಿ ಆಸ್ಪತ್ರೆ, ಏರಿಯಾ, ಸೇರಿದಂತೆ ಹಲವು ಬಡಾವಣೆಯ ಚರಂಡಿ ನೀರು ಇಲ್ಲಿಂದಲೇ ಮುಂದೆ ದೊಡ್ಡಾಗಿರುವ ರಾಜಕಾಲುವೆ ಸೇರುತ್ತದೆ ಎಂದರು.

ಹಲವಾರು ಬಡಾವಣೆಯ ನೀರು ಇಲ್ಲಿಂದಲೇ ಹರಿದುಹೋಗುವುದರಿಂದ ಚರಂಡಿ ಚಿಕ್ಕದಾಗಿ ಇರೋದಕ್ಕೆ ಮಳೆ ಬಂದಾಗ ಮನೆಗಳಿಗೆ ನೀರು ನುಗ್ಗುತ್ತದೆ ಮತ್ತು ರಸ್ತೆಯಲ್ಲಿ ಸಾಕಷ್ಟು ಕಸ ಇರುತ್ತದೆ. ಇದರಿಂದ ಮನೆಗಳಿಗೆ ಓಡಾಡುವುದು ಕಸವನ್ನು ತುಳಿದುಕೊಂಡು ಓಡಾಡುವಂತೆ ಆಗುತ್ತದೆ. ಇವತ್ತು ಮಳೆ ಬಂದಾಗ ಸಿರಿಗೆರೆ ಬಸವನಗೌಡ್ರು ಮನೆ ಸಂಪೂರ್ಣ ನೀರಿನಲ್ಲಿ ಆವರಿಸಿಕೊಂಡು ನೀರನ್ನು ಹೊರಗಡೆ ಸಾಗಿಸಲು ಹರ ಸಾಹಸ ಪಟ್ಟಿದ್ದಾರೆ.



ಇದರಿಂದಾಗಿ ಸ್ಥಳೀಯ ವಾರ್ಡ್ ಸದಸ್ಯರಾದ ಅಶ್ವಿನಿ ಕೃಷ್ಣ ರವರೆಗೆ ಗಮನಕ್ಕೆತಂದಾಗ, ಅವರು ಡೆಸ್ಕ್ ಸ್ಯಾಬ್ ಮಾಡಿಸುವುದಾಗಿ ಚರಂಡಿ ಕಾಮಗಾರಿಯನ್ನು ಆರಂಭಸಿದಾಗ ಏನೋ ತಾಂತ್ರಿಕ ದೋಷದಿಂದಾಗಿ ಕಾಮಗಾರಿಯನ್ನು ಅರ್ಧಕ್ಕೆ ನಿಲ್ಲಿಸಿದ ಪರಿಣಾಮ, ಚರಂಡಿ ಒಡೆದು ಜಲ್ಲಿಯನ್ನು ಚರಂಡಿ ಪಕ್ಕದಲ್ಲಿ ಹಾಕಿ ಕಾಮಗಾರಿ ಸ್ಥಗಿತಗೊಳಿಸಿದ್ದಕ್ಕೆ ಮಳೆ ಬಂದಾಗ ಚರಂಡಿ ಕಟ್ಟಿಕೊಂಡು ಮನೆಗಳಿಗೆ ನೀರು ನುಗ್ಗತ್ತಿದೆ ಎಂದು ಹೇಳಿದ್ದಾರೆ.

ಸಂಜೆ ಮನೆಗಳಿಗೆ ನೀರು ನುಗ್ಗಿದ್ದರಿಂದ ಸ್ಥಳೀಯ ನಿವಾಸಿಗಳು ನಗರಸಭೆಯ ಸದಸ್ಯರಾದ ಅಶ್ವಿನಿ ಕೃಷ್ಣ ರವರ ಮನೆಗೆ ಕಸವನ್ನು ಪುಟ್ಟಿಯಲ್ಲಿ ತೆಗೆದುಕೊಂಡು ಹೋಗಿ ಅವರ ಮನೆಯ ಮುಂದೆ ಹಾಕೋದು ಎಂದು ತೀರ್ಮಾನ ಮಾಡಲಾಗಿತ್ತು. ಆದರೆ, ಅಷ್ಟರಲ್ಲಿ ಮಳೆ ಆರ್ಭಟ ಕಡಿಮೆಯಾಗಿದ್ದರಿಂದ ನಾಳೆ ನಗರಸಭೆಯ ಅಧಿಕಾರಿಗಳಿಗೆ ಚರಂಡಿ ಆದಷ್ಟು ಬೇಗನೆ ದುರಸ್ತಿ ಪಡಿಸುವಂತೆ ಮನವಿ ಸಲ್ಲಿಸಲಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ರವಿಗೌಡ, ನಾರಾಯಣ, ಸಚ್ಚಿನ್, ಯುವರಾಜ್, ಅರುಣ್ ಕುಮಾರ್, ರವಿಕುಮಾರ್ ಮಂಜುನಾಥ್, ಇತರರು ಹಾಜರಿದ್ದರು.

# ಹೊನ್ನಾಳಿ : ಮುಂಗಾರು ಮಳೆಗೆ ರೈತರ ಹರ್ಷ

ಹೊನ್ನಾಳಿ, ಜೂ. 6- ಬಿರು ಬಿಸಿಲಿನಿಂದ ತತ್ತರಿಸಿ ಹೋಗಿದ್ದ ಜನತೆಗೆ ಕಳೆದೆರಡು ದಿನಗಳಿಂದ ಸುರಿಯುತ್ತಿರುವ ಮಳೆ ರೈತ ಸಮುದಾಯದಲ್ಲಿ ಆಶಾ ಭಾವನೆ ಮೂಡಿಸಿದೆ.

ಕಳೆದ ವರ್ಷ ಹಿಂದೆಂದೂ ಕಂಡರಿಯದ ಭೀಕರ ಬರಗಾಲ ತಲೆದೋರಿ ರೈತ ಸಮುದಾಯ ಆತಂಕಕ್ಕೀಡಾಗಿದ್ದಿತು. ಈ ಬಾರಿ ಮಳೆ ಚನ್ನಾಗಿ ಬರಲಿದೆ ಎಂದು ಹವಾಮಾನ ಇಲಾಖಾಧಿಕಾರಿಗಳು ಮಾಹಿತಿ ನೀಡಿದ್ದು, ರೈತರು ಬಿತ್ತನೆ ಕಾರ್ಯಕ್ಕೆ ಭೂಮಿಯನ್ನು ಹದಗೊಳಿಸುವ ಕಾರ್ಯಕ್ಕೆ ಮುಂದಾಗಿದ್ದಾರೆ.

ಮಳೆ ಮಾಪನ ಕೇಂದ್ರದಲ್ಲಿ ಹೊನ್ನಾಳಿ-12.0, ಸವಳಂಗ ಮತ್ತು ಕುಂದೂರು-ಮಳೆಯಾಗಿರುವ ವರದಿಯಾಗಿಲ್ಲ, ಬೆಳಗುತ್ತಿ-23.4, ಹರಳಹಳ್ಳಿ-18.2, ಗೋವಿನಕೋವಿ-10.2, ಸಾಸ್ವೆಹಳ್ಳಿ-51.6, ಒಟ್ಟು ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕುಗಳಿಂದ 16.4 ಮಿ.ಮೀ.ಮಳೆಯಾಗಿರುವ ವರದಿಯಾಗಿದೆ.

ಗೋವಿನಕೋವಿ ಹೋಬಳಿ ವ್ಯಾಪ್ತಿಯ ಹರಳಹಳ್ಳಿ ಗ್ರಾಮದ ಗುರುಶಾಂತಪ್ಪ ಇವರ ಮನೆಯ ಗೋಡೆಯು ಮಳೆಯಿಂದ ಬಿದ್ದಿದ್ದು, ಯಾವುದೇ ಪ್ರಾಣ ಹಾನಿಯಾಗಿರುವುದಿಲ್ಲವೆಂದು ಗ್ರೇಡ್-2 ತಹಶೀಲ್ದಾರ್ ಸುರೇಶ್ ಪತ್ರಿಕೆಗೆ ಮಾಹಿತಿ ನೀಡಿದ್ದಾರೆ.

# ಮೈತ್ರಿ ಅಭ್ಯರ್ಥಿಗಳಿಗೆ ಗೆಲುವು

(1ನೇ ಪುಟದಿಂದ) ಮೈತ್ರಿ ಅಭ್ಯರ್ಥಿ ಕೆ. ವಿವೇಕಾನಂದ ಅವರು 4,622 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ.

ಮೊದಲ ಪ್ರಾಶಸ್ತ್ಯದ ಮತಗಳಲ್ಲೇ ಅವರಿಗೆ ಜಯ ದೊರೆತಿದೆ. ಅವರು 7,916 ಮತಗಳನ್ನು ಗಳಿಸಿದ್ದಾರೆ. ಕಾಂಗ್ರೆಸ್‌ನ ಮರಿತಿಬ್ಬೇಗೌಡ ಅವರು 4,658 ಮತಗಳನ್ನು ಮಾತ್ರ ಪಡೆದಿದ್ದಾರೆ. ನೈಋತ್ಯ ಶಿಕ್ಷಕರ ಕ್ಷೇತ್ರದಲ್ಲಿ ಹಾಲಿ ಸದಸ್ಯ ಜೆಡಿಎಸ್‌ನ ಎಸ್.ಎಲ್. ಭೋಜೇಗೌಡ ಮೊದಲ ಪ್ರಾಶಸ್ತ್ಯದಲ್ಲೇ 5,267 ಮತಗಳ ಅಂತರದಿಂದ ಜಯ ಗಳಿಸಿದ್ದಾರೆ. ಭೋಜೇಗೌಡ 9,829 ಮತಗಳನ್ನು ಪಡೆದರೆ, ಸಮೀಪದ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಕೆ.ಕೆ. ಮಂಜುನಾಥ ಕುಮಾರ್ 4,562 ಮತಗಳನ್ನಷ್ಟೆ ಗಳಿಸಿದರು.

# ಸಂಭ್ರಮದ ಶ್ರೀ ವಿಠಲ ರುಕ್ಮಿಣಿ ದಿಂಡಿ ಮಹೋತ್ಸವ



ಹರಿಹರ, ಜೂ.6- ನಗರದ ನಾಮದೇವ ಸಿಂಪಿ ಸಮಾಜ ದೈವ ಮಂಡಳಿ ವತಿಯಿಂದ ಶ್ರೀ ವಿಠ್ಠಲ ರುಕ್ಮಿಣಿ ದಿಂಡಿ ಮಹೋತ್ಸವದ ಮೆರವಣಿಗೆಯು ಸಂಭ್ರಮದಿಂದ ನಡೆಯಿತು.

ನಾಮದೇವ ಕಲ್ಯಾಣ ಮಂಟಪ ಆವರಣದಲ್ಲಿರುವ ಶ್ರೀ ವಿಠ್ಠಲ ರುಕ್ಮಿಣಿ ದೇವರಿಗೆ ಬೆಳಗ್ಗೆ ಪಂಚಪದಿ ಕಾಕಡಾರತಿ ಭಜನೆ, ಗ್ರಂಥರಾಜ ಶ್ರೀ ಜ್ಞಾನೇಶ್ವರಿ ಪಾರಾಯಣ ಸೇರಿದಂತೆ ವಿಶೇಷ ಪೂಜೆ, ಮಹಾಮಂಗಳಾರತಿ ಅರ್ಪಿಸಿ, ಪಲ್ಲಕ್ಕಿ ಉತ್ಸವದ ಮೆರವಣಿಗೆ ಆರಂಭಗೊಂಡಿತು.

ಈ ಸಂದರ್ಭದಲ್ಲಿ ನಾಮದೇವ ಸಿಂಪಿ ಸಮಾಜದ ಅಧ್ಯಕ್ಷ ಶಂಕರ್ ಖಟಾವ್ಕರ್, ಉಪಾಧ್ಯಕ್ಷ ಡಿ.ಜಿ. ರಘುನಾಥ್, ಕಾರ್ಯದರ್ಶಿ ಐರಣಿ ನಾಗರಾಜ್, ಸಹ ಕಾರ್ಯದರ್ಶಿ ಪರಶುರಾಮ್ ಅಂಬೇಕರ್, ಮೆಡ್ಲೇರಿ ತುಕಾರಾಮ್, ಖಜಾಂಚಿ ಪರಶುರಾಮ್ ಹೋವಳೆ, ಕಾಳಪ್ಪ ಬೊಂಗಾಳೆ, ಸುಭಾಷ್ ಬೊಂಗಾಳೆ, ಜಗದೀಶ್ ಮಹೇಂದ್ರಕರ್, ರಾಘವೇಂದ್ರ ಬೊಂಗಾಳೆ, ಅರುಣ್ ಕುಮಾರ್ ಬೊಂಗಾಳೆ, ಚಂದ್ರಕಾಂತ ಹೋವಳೆ, ಗೋಪಾಲ, ಭೋಜರಾಜ್ ಹೋವಳೆ, ಮನೋಹರ ಬೊಂಗಾಳೆ, ಮುರುಳಿಧರ್ ದುರಗೋಜಿ, ಪದ್ಮಾ ಸುಭಾಷ್, ಮುಕ್ತ ಕುಮಾರ್, ಕಲಾವತಿ ರವೀಂದ್ರನಾಥ, ನಿರ್ಮಲ ರಮೇಶ್, ದೀಪ ಮಂಜುನಾಥ್, ಲಕ್ಷ್ಮೀ ಮೋಹನ್ ದುರುಗೋಜಿ, ಅಂಜನಾ ಶಂಕರ್ ಖಟಾವ್ಕರ್, ಸುರೇಖಾ ಅರುಣ್ ಕುಮಾರ್ ಬೊಂಗಾಳೆ, ನಾಗರತ್ನ, ವಾಸುದೇವ ಮಹೇಂದ್ರಕರ್, ಮೋಹನ್ ದುರುಗೋಜಿ, ಸಂತೋಷ ಕುಮಾರ್, ಪಾಂಡುರಂಗ ಪಾಲಂಕರ್, ಸಚ್ಚಿನ್ ಬೊಂಗಾಳೆ, ನಾಗರತ್ನ ಜ್ಞಾನೇಶ್ವರ ಹೋವಳೆ ಇತರರು ಹಾಜರಿದ್ದರು.

## ಹರಿಹರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಮಾಕನೂರು, ಕರಲಗೇರಿ, ಹೊಸಪೇಟೆ-ಕೋಡಿಯಾಲ, ಕವಲೆತ್ತು, ನಲವಾಗಲು ಗ್ರಾಮಗಳಿಗೆ ಹರಿಹರ ನೀರು ಸರಬರಾಜಾಗುವ ನೀರು ಸರಬರಾಜಿನ ವಾಟರ್ ಸಪ್ಲೈ ಸ್ಥಾವರಕ್ಕೆ , ಪಾಲಿಫೈಬರ್, ಸಿಂಥೈಟ್ಸ್ ಫ್ಯಾಕ್ಟರಿಗಳಿಗೆ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

## ಅಡುಗೆ ಅನಿಲ ಇಕೆವೈಸಿ ಸುರಕ್ಷತಾ ಪರಿಶೀಲನೆಗೆ ಮನವಿ

ದಾವಣಗೆರೆ, ಜೂ.6- ಪ್ರತಿಯೊಬ್ಬ ಅಡುಗೆ ಅನಿಲ ಗ್ರಾಹಕರು ಇಕೆವೈಸಿ ಸುರಕ್ಷತಾ ಪರಿಶೀಲನೆ ಮಾಡಿಸಿಕೊಳ್ಳಬೇಕು ಎಂದು ಜಿಲ್ಲಾ ಅಡುಗೆ ಅನಿಲ (ಸರ್ಕಾರಿ ಸ್ವಾಮ್ಯ) ವಿತರಕರ ಸಮೂಹ ಮನವಿ ಮಾಡಿದೆ. ಇಕೆವೈಸಿ ಹಾಗೂ ಸುರಕ್ಷತಾ ತಪಾಸಣೆ ಸಂಪೂರ್ಣ ಉಚಿತವಾಗಿರುತ್ತದೆ ಹಾಗೆಯೇ ನಿಯಮಿತವಾಗಿ ಸಬ್ಸಿಡಿ ಹಣ ತಮ್ಮ ಬ್ಯಾಂಕ್ ಖಾತೆಗೆ ಜಮಾ ಆಗಲು ಇದು ಅಗತ್ಯವಾಗಿದೆ.

ತಮ್ಮ ಸುರಕ್ಷತೆಗಾಗಿ ಸುರಕ್ಷಾ ಹೋಸ್‌ನ್ನು ಐದು ವರ್ಷ ಅವಧಿ ಮುಗಿದರೆ ಬದಲಾಯಿಸುವುದು ಅನಿವಾರ್ಯ.

ಈ ಸುರಕ್ಷಾ ಹೋಸ್ ಅನ್ನು ಕೇಂದ್ರ ಸರ್ಕಾರದ ಸೂಚನೆ ಮೇರೆಗೆ ರಿಯಾಯಿತಿ ದರದಲ್ಲಿ ನೀಡಲಾಗುತ್ತದೆ. ವಿವರಕ್ಕೆ ಸಂಬಂಧಿಸಿದ ವಿತರಕರನ್ನು ಸಂಪರ್ಕಿಸುವಂತೆ ವಿತರಕರ ಪರವಾಗಿ ಜ್ಯೋತಿ ಗ್ಯಾಸ್ ಏಜೆನ್ಸಿಯ ಅಂದನೂರು ಆನಂದ್ ಕೋರಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಸಿದ್ಧವೀರಪ್ಪ ಬಡಾವಣೆಯ 9, 10, 11 ಮತ್ತು 12 ನೇ ಕ್ರಾಸ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

## ಯಲವಟ್ಟಿ ಗ್ರಾಮದ ಕರಿಬಸಪ್ಪ ಚೌದ್ರಿ ನಿಧನ



ಹರಿಹರ ತಾಲ್ಲೂಕು ಯಲವಟ್ಟಿ ಗ್ರಾಮದ ಗ್ರಾ.ಪಂ. ಮಾಜಿ ಅಧ್ಯಕ್ಷ ಎ. ರಾಮಚಂದ್ರಪ್ಪನವರ ಹಿರಿಯ ಸಹೋದರರಾದ ಶ್ರೀ ಕರಿಬಸಪ್ಪ ಚೌದ್ರಿ (65 ವರ್ಷ) ಅವರು ದಿನಾಂಕ 6.6.2024ರ ಗುರುವಾರ ಮಧ್ಯಾಹ್ನ 2.30ಕ್ಕೆ ನಿಧನರಾದರು. ಪತ್ನಿ, ಸಹೋದರರು, ಸಹೋದರಿಯರು, ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 7.6.2024ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಯಲವಟ್ಟಿಯಲ್ಲಿ ನೆರವೇರಲಿದೆ.

# ರಾಮನ ನಾಡಿನಲ್ಲಿ ಹಿನ್ನಡೆ, ದೇವರ ನಾಡಿನಲ್ಲಿ ಮುನ್ನಡೆ

## ಕೇರಳದಲ್ಲಿ ಮತ ಗಳಿಕೆ ಹೆಚ್ಚಿಸಿಕೊಂಡು ರಾಜಕೀಯ ಲೆಕ್ಕಾಚಾರ ಬದಲಿಸಿದ ಬಿಜೆಪಿ

ತಿರುವನಂತಪುರಂ, ಜೂ. 6 - ಶ್ರೀರಾಮನ ನಗರವಾದ ಅಯೋಧ್ಯೆಯಲ್ಲಿ ಬಿಜೆಪಿ ಕಹಿ ಸೋಲುಂಡಿದೆ. ಆದರೆ, ದೇವರ ನಾಡು ಎಂದೇ ಹೆಸರಾದ ಕೇರಳದಲ್ಲಿ ಬಿಜೆಪಿ ಗಳಿಸಿರುವ ಮತಗಳ ಪ್ರಮಾಣ ಗಣನೀಯವಾಗಿ ಹೆಚ್ಚಾಗಿದೆ.

ಕೇರಳದಲ್ಲಿ ಬಿಜೆಪಿ ಕೇವಲ ಒಂದು ಸ್ಥಾನದಲ್ಲಿ ಗೆಲುವು ದಾಖಲಿಸಿದ್ದರೂ ಸಹ, ರಾಜಕೀಯ ವಲಯದಲ್ಲಿ ಸಾಕಷ್ಟು ಚರ್ಚೆಗೆ ಕಾರಣವಾಗಿದೆ. ಕಳೆದ ಬಾರಿಗೆ ಹೋಲಿಸಿದರೆ ಬಿಜೆಪಿಯ ಮತ ಗಳಿಕೆ ಹೆಚ್ಚಾಗಿದ್ದು, ಇದು ರಾಜಕೀಯ ಪರಿಣಿತರ ಗಮನ ಸೆಳೆದಿದೆ.

ನಟ - ರಾಜಕಾರಣಿ ಸುರೇಶ್ ಗೋಪಿ ಅವರು ತ್ರಿಸ್ಸೂರಿನಿಂದ ಗೆಲುವು ಸಾಧಿಸಿದ್ದಾರೆ. ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಎನ್.ಡಿ.ಎ. ಗಳಿಸಿದ ಮತಗಳ ಪಾಲು ಶೇ.20ಕ್ಕೆ ತಲುಪಿದೆ. ಕಳೆದ ಬಾರಿ ಎನ್.ಡಿ.ಎ. ಶೇ.15ರಷ್ಟು ಮತ ಗಳಿಸಿತ್ತು. ಕೇರಳದ ರಾಜಕೀಯ ಹಿಂದಿನಿಂದಲೂ ಎರಡು ಬಣಗಳ ನಡುವೆ ಹಂಚಿಕೆಯಾಗಿತ್ತು. ಎಡಪಕ್ಷಗಳ ನೇತೃತ್ವದ ಎಲ್.ಡಿ.ಎಫ್. ಹಾಗೂ ಕಾಂಗ್ರೆಸ್ ನೇತೃತ್ವದ ಯು.ಡಿ.ಎಫ್.ಗಳು ರಾಜ್ಯದಲ್ಲಿ ಆಡಳಿತ ನಡೆಸುತ್ತಾ ಬಂದಿವೆ. ಇನ್ನು ಮುಂದೆ ತ್ರಿಕೋನ ಸ್ಪರ್ಧೆಯಾಗಲಿದೆಯೇ? ಎಂಬ ಲೆಕ್ಕಾಚಾರಗಳೂ ನಡೆದಿವೆ. 2011ರ ವಿಧಾನಸಭಾ ಚುನಾವಣೆಗಳ ನಂತರ ಪರಿಸ್ಥಿತಿ ನಿಧಾನವಾಗಿ ಬದಲಾಗುತ್ತಾ ಸಾಗಿತ್ತು. ಈಗ ಬದಲಾವಣೆ ಸ್ಪಷ್ಟವಾಗಿ ಗೋಚರವಾಗುತ್ತಿದೆ.

ಕೇರಳದ ಮತಗಟ್ಟೆಗಳಲ್ಲಿ ಎನ್.ಡಿ.ಎ. ಪ್ರವೇಶ ಪಡೆಯುತ್ತಿದೆ. ತ್ರಿಸ್ಸೂರಿನಲ್ಲಿ ಗೆದ್ದಿರುವ ಜೊತೆಗೆ, ಅತ್ತಿಂಗಳ್ ಹಾಗೂ ಅಲಪ್ಪುಳಗಳಲ್ಲಿ ಮತ ಗಳಿಕೆ ಹೆಚ್ಚಾಗಿದೆ. ಕೇರಳದಲ್ಲೂ ಈಗ ಹಿಂದುತ್ವದ ಪ್ರಭಾವ ಕಂಡು ಬರುತ್ತಿದೆ ಎಂದು ರಾಜಕೀಯ ವಿಶ್ಲೇಷಕರು ಹೇಳುತ್ತಿದ್ದಾರೆ.

ತ್ರಿಸ್ಸೂರಿನಲ್ಲಿ ಬಿಜೆಪಿ ಶೇ.37.8ರಷ್ಟು ಮತ ಪಡೆದಿದೆ. ತಿರುವನಂತಪುರಂನಲ್ಲಿ ಬಿಜೆಪಿ ಶೇ.35.52ರಷ್ಟು ಮತ ಗಳಿಸಿದೆ.ಎಡ ಪಕ್ಷಗಳ ಪ್ರಾಬಲ್ಯ ಇರುವ ಅತ್ತಿಂಗಳ್‌ನಲ್ಲಿ ಬಿಜೆಪಿ ಅಭ್ಯರ್ಥಿ ಶೇ.31.64ರಷ್ಟು ಮತ ಗಳಿಸಿದ್ದಾರೆ. ಇದು ಯು.ಡಿ.ಎಫ್. ಅಭ್ಯರ್ಥಿಗಿಂತ ಶೇ.1.65ರಷ್ಟು ಮಾತ್ರ ಕಡಿಮೆಯಾಗಿದೆ. ಸಿಪಿಐ (ಎಂ) ಹಾಗೂ ಕಾಂಗ್ರೆಸ್ ಪ್ರಾಬಲ್ಯ ಇರುವ ಅಲಪ್ಪುಳದಲ್ಲಿ ಬಿಜೆಪಿ ಅಭ್ಯರ್ಥಿ ಶೇ.28.3ರಷ್ಟು ಮತ ಪಡೆದಿದ್ದಾರೆ.

ಕ್ರಿಶ್ಚಿಯನ್ನರು ಸಾಂಪ್ರದಾಯಿಕವಾಗಿ ಕಾಂಗ್ರೆಸ್ ಬೆಂಬಲಿಸುತ್ತಾ ಬಂದಿದ್ದಾರೆ. ಒ.ಬಿ.ಸಿ. ವರ್ಗದವರು ಎಡಪಕ್ಷಗಳಿಗೆ ಬೆಂಬಲಿಸುತ್ತಿದ್ದಾರೆ. ಈ ಬಾರಿ ಉಭಯ ಸಮುದಾಯದವರು ಬಿಜೆಪಿಯ ಬಗ್ಗೆ ಅಪಥ್ಯದ ಭಾವನೆ ಹೊಂದಿಲ್ಲ ಎಂದು ವಿಶ್ಲೇಷಕರು ಹೇಳಿದ್ದಾರೆ.

ತ್ರಿಸ್ಸೂರು ಹಾಗೂ ತಿರುವನಂತಪುರಂಗಳಲ್ಲಿ ಕ್ರಿಶ್ಚಿಯನ್ನರ ಮತ ಬಿಜೆಪಿಗೆ ದೊರೆತಿರುವುದು ಸ್ಪಷ್ಟವಾಗಿ ಕಂಡು ಬರುತ್ತಿದೆ ಎಂದು ಕೇರಳ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ಉಪನ್ಯಾಸಕ ಸಜದ್ ಇಬ್ರಾಹಿಂ ಅಭಿಪ್ರಾಯ ಪಟ್ಟಿದ್ದಾರೆ.

ಕೇರಳದಲ್ಲಿ ಬಿಜೆಪಿ ಧರ್ಮದ ವಿಷಯವನ್ನು ಪ್ರಮುಖವಾಗಿ ಪ್ರಸ್ತಾಪಿಸುತ್ತಿಲ್ಲ. ಅವರು ಒ.ಬಿ.ಸಿ. ಹಾಗೂ ದಲಿತರನ್ನು ಸೆಳೆಯುವ ಪ್ರಯತ್ನದಲ್ಲಿದ್ದಾರೆ. ಇದು ಬಿಜೆಪಿ ನೆಲೆ ವಿಸ್ತರಿಸಲು ನೆರವಾಗುತ್ತಿದೆ ಎಂದು ಸೆಂಟ್ರಲ್ ಯೂನಿವರ್ಸಿಟಿಯ ಮಾಜಿ ಕುಲಪತಿ ಡಾ. ಜಿ. ಗೋಪಕುಮಾರ್ ಹೇಳಿದ್ದಾರೆ.

ಧರ್ಮವನ್ನು ಮುನ್ನೆಲೆಗೆ ತರುವುದರಿಂದ ಕೇರಳದಲ್ಲಿ ಹೆಚ್ಚು ಪ್ರಯೋಜನವಾಗುವುದಿಲ್ಲ ಎಂಬುದು ಬಿಜೆಪಿಗೆ ತಿಳಿದಿದೆ. ಹೀಗಾಗಿ ಬಿಜೆಪಿ ಕೇರಳದಲ್ಲಿ ಬಹುತ್ವದ ಸಿದ್ಧಾಂತ ಮುಂದಿಡುತ್ತಿದೆ ಎಂದವರು ಹೇಳಿದ್ದಾರೆ.

ಎಡಪಕ್ಷಗಳು ಮುಸ್ಲಿಮರ ಓಲೈಕೆಯಲ್ಲಿ ತೊಡಗಿರುವುದೇ ಕೇರಳದಲ್ಲಿ ಬಿಜೆಪಿ ಬೆಳೆಯಲು ನೆರವಾಗಿದೆ ಎಂದು ಕೇರಳ ವಿಶ್ವವಿದ್ಯಾಲಯದ ಮಾಜಿ ಉಪ ಕುಲಪತಿ ಡಾ. ಪ್ರಭಾಷ್ ಅಭಿಪ್ರಾಯ ಪಟ್ಟಿದ್ದಾರೆ.

ಈ ಹಿಂದೆ ಎಡಪಕ್ಷಗಳಿಗೆ ಎಲ್ಲರ ಮತಗಳು ದೊರೆಯುತ್ತಿದ್ದವು. ಆದರೆ, ಅವರು ಬದ್ಧತೆಯುಳ್ಳ ಮತದಾರರನ್ನು ಕಳೆದುಕೊಳ್ಳುತ್ತಿದ್ದಾರೆ. ಮೊದಲು ಯು.ಡಿ.ಎಫ್.ಗೆ ಮತ ಕಳೆದುಕೊಂಡಿದ್ದರು. ಈಗ ಎನ್.ಡಿ.ಎ.ಗೆ ಮತ ಕಳೆದುಕೊಳ್ಳುತ್ತಿದ್ದಾರೆ ಎಂದವರು ಹೇಳಿದ್ದಾರೆ.

ಕೇರಳದ ಕ್ರಿಶ್ಚಿಯನ್ ಸಮುದಾಯದಲ್ಲಿ ಲವ್ ಜಿಹಾದ್‌ನ ಕಳವಳ ಇದೆ. ಬಿಜೆಪಿ ಈ ವಿಷಯವನ್ನು ಕ್ರಿಶ್ಚಿಯನ್ ಸಮುದಾಯದಲ್ಲಿ ಹೆಚ್ಚಾಗಿ ಪ್ರಸ್ತಾಪಿಸುತ್ತಿದೆ ಎಂದು ಗೋಪಕುಮಾರ್ ಹೇಳಿದ್ದಾರೆ. ಆದರೆ, ತ್ರಿಸ್ಸೂರಿನಲ್ಲಿ ಗೋಪಿ ಗೆದ್ದಿರುವುದು ವೈಯಕ್ತಿಕ ಕಾರಣಕ್ಕಾಗಿ. ಗೋಪಿ ಅವರು ಸಿನಿಮಾ ರಂಗದ ಪ್ರಮುಖ ದಾನಿಗಳಲ್ಲಿ ಒಬ್ಬರಾಗಿದ್ದಾರೆ. ಅವರು ಬಡವರಿಗೆ ಸಾಕಷ್ಟು ನೆರವಾಗಿದ್ದಾರೆ. ಇದು ಅವರ ಗೆಲುವಿಗೆ ಕಾರಣ ಎಂದೂ ಅವರು ತಿಳಿಸಿದ್ದಾರೆ.

# ಪ್ರಜ್ವಲ್ ಕಸ್ಟಡಿ ಅವಧಿ ವಿಸ್ತರಣೆ



ಬೆಂಗಳೂರು, ಜೂ. 6 - ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ, ಅತ್ಯಾಚಾರ ಹಾಗೂ ಅಪಹರಣ ಆರೋಪ ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರಜ್ವಲ್ ರೇವಣ್ಣ ಅವರ ಹೆಚ್ಚಿನ ವಿಚಾರಣೆಗೆ ಜೂನ್ 10 ರವರೆಗೆ ಮತ್ತೆ ಎಸ್‌ಐಟಿ ಕಸ್ಟಡಿ ಅವಧಿ ವಿಸ್ತರಿಸಿ ನ್ಯಾಯಾಲಯ ಆದೇಶಿಸಿದೆ.

ಪ್ರಜ್ವಲ್ ಅವರ ಎಸ್‌ಐಟಿ ಕಸ್ಟಡಿ ಅವಧಿ ಇಂದು ಮುಕ್ತಾಯವಾಗಲಿದ್ದರಿಂದ, ಅಧಿಕಾರಿಗಳು ಮತ್ತೆ ನಗರದ 42ನೇ ಎಸಿಎಂಎಂ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಮುಂದೆ ಹಾಜರುಪಡಿಸಿದರು.

ವಾದ-ಪ್ರತಿವಾದ ಆಲಿಸಿದ ನಂತರ ನ್ಯಾಯಾಧೀಶ ಕೆ.ಎನ್.ಶಿವಕುಮಾರ್, ಕಸ್ಟಡಿ ಅವಧಿಯನ್ನು ಇನ್ನೂ ನಾಲ್ಕು ದಿನಗಳಿಗೆ ವಿಸ್ತರಿಸಿದರು. ಸರ್ಕಾರಿ ವಕೀಲ ಅಶೋಕ್ ನಾಯಕ್ ವಾದ ಮಂಡನೆ ಮಾಡಿ, ಪ್ರಕರಣದ ತನಿಖೆ ಇನ್ನೂ ಮುಗಿದಿಲ್ಲವಾದ್ದರಿಂದ ಆರೋಪಿ ಕಸ್ಟಡಿ ವಿಸ್ತರಿಸುವಂತೆ ಕೋರಿದರು.

ಇದಕ್ಕೆ ಪ್ರಜ್ವಲ್ ಪರ ಹಿರಿಯ ವಕೀಲ ಟಾಮಿ ಸೆಬಾಸ್ಟಿಯನ್ ವಾದ ಮಂಡಿಸಿ, ಕಸ್ಟಡಿ ಅವಧಿ ವಿಸ್ತರಣೆ ಅಗತ್ಯವಿಲ್ಲ, ಪ್ರಜ್ವಲ್ ವಿದೇಶಕ್ಕೆ ತೆರಳುವುದು, ಹಣ ಹೇಗೆ ಸಂದಾಯವಾಯಿತು ಎಂಬುದು ತನಿಖೆ ವ್ಯಾಪ್ತಿಯಲ್ಲಿಲ್ಲ. ಇದಕ್ಕಾಗಿ ಕಸ್ಟಡಿಗೆ ಪಡೆದು ತನಿಖೆ ನಡೆಸುವ ಅಗತ್ಯವಿಲ್ಲ ಎಂದರು.

ಈ ಸಂದರ್ಭದಲ್ಲಿ ಮಧ್ಯೆ ಪ್ರವೇಶಿಸಿದ ನ್ಯಾಯಾಧೀಶರು, ಕಸ್ಟಡಿಗೆ ಏಕೆ ನೀಡಬೇಕು ಎಂದು ಕೇಳಿ, ಜೊತೆಗೆ ತನಿಖಾಧಿಕಾರಿಗಳಿಗೆ ಕೇಸ್ ಡೈರಿ ನೀಡಲು ಆದೇಶಿಸಿದರು. ಅಲ್ಲದೇ, ಪ್ರಜ್ವಲ್ ಅವರನ್ನು ಕಸ್ಟಡಿ ಅವಧಿಯಲ್ಲಿ ಏನಾದರೂ ಸಮಸ್ಯೆ ಉಂಟಾಯಿತೇ ಎಂದು ಕೇಳಿದರು. ಆಗ ಪ್ರಜ್ವಲ್, ಇಲ್ಲ ಎಂದು ಉತ್ತರಿಸಿದರು.

ಮುಂದುವರೆದು ವಾದ ಮಂಡಿಸಿದ ಸರ್ಕಾರಿ ವಕೀಲರು, ತನಿಖೆಗೆ ಸಿಕ್ಕ ಸಮಯ ಸಾಕಾಗಿಲ್ಲ, ಬಂಧನದ ನಂತರ ಅವರು ವಿಶ್ರಾಂತಿಗೆ ಒಳಗಾದರು. ವಿದೇಶದಲ್ಲಿ ಇದ್ದ ವೇಳೆ ಹಣ ಹೇಗೆ ಸಂದಾಯವಾಯಿತು ಎಂದು ತಿಳಿದಿಲ್ಲ, ಈ ಬಗ್ಗೆ ಇನ್ನೂ ತನಿಖೆ ಆಗಬೇಕಿದೆ ಎಂದರು. ಕೆಲವು ಸಂತ್ರಸ್ತೆ ಸಾಕ್ಷಿಗಳೊಂದಿಗೆ ಮುಖಾಮುಖಿ ವಿಚಾರಣೆ ನಡೆಯಬೇಕಿದೆ, ನಾನು ಏನೂ ಮಾಡಿಲ್ಲ ಎಂದು ಪ್ರಜ್ವಲ್ ಹೇಳುತ್ತಿದ್ದಾರೆ, ಅಲ್ಲದೆ ಹೊಟ್ಟೆ ನೋವು ಎಂದು ಆಸ್ಪತ್ರೆಗೆ ಹೋಗಿದ್ದರು. ಹೀಗಾಗಿ ಪೂರ್ಣ ತನಿಖೆ ನಡೆದಿಲ್ಲ ಎಂದು ಹೇಳಿದರು.

ಆರೋಪಿಯ ಮೊಬೈಲ್ ಮತ್ತು ಎಲೆಕ್ಟ್ರಾನಿಕ್ಸ್ ಉಪಕರಣಗಳ ಬಗ್ಗೆ ತನಿಖೆ ಮಾಡಬೇಕಿದೆ, ಇವರು ಮೊಬೈಲ್ ನಾಶ ಪಡಿಸಿರುವ ಬಗ್ಗೆ ಮಾಹಿತಿ ಇದೆ.

ನನ್ನ ಮೊಬೈಲ್ ಇಲ್ಲ, ನಾನು ಪಿಎ ಮೊಬೈಲ್ ಉಪಯೋಗಿಸುತ್ತಿದ್ದೆ ಎಂದಿದ್ದಾರೆ. ಈ ಎಲ್ಲ ವಿಷಯಗಳ ಬಗ್ಗೆ ಹೆಚ್ಚಿನ ತನಿಖೆ ಅವಶ್ಯ ಇರುವುದರಿಂದ ಕಸ್ಟಡಿ ಅವಧಿ ವಿಸ್ತರಿಸುವಂತೆ ಮನವಿ ಮಾಡಿದರು.

# ಅಗಲಿದ ಗುರುವಿಗೆ ಜೆಂಬಿಗಿ ಮೃತ್ಯುಂಜಯ ಕಂಬನಿ

ದಾವಣಗೆರೆ, ಜೂ. 6- ಪ್ರೀತಿಯ ಹಾಗೂ ಆತ್ಮೀಯ ಅಭಿಮಾನದ ಗುರುಗಳಾಗಿದ್ದ ಡಾ. ಎಂ.ಜಿ. ಈಶ್ವರಪ್ಪ ಅವರ ಅಗಲಿಕೆ ನನ್ನಲ್ಲಿ ಅಪಾರ ನೋವುಂಟು ಮಾಡಿದೆ. ಅವರು ತಮ್ಮ ಕಾರ್ಯವೈಖರಿ ಮತ್ತು ಆದರ್ಶ ಜೀವನದ ರೀತಿಯಿಂದ ಎಲ್ಲರಿಗೂ ಪ್ರೇರಣಾ ಶಕ್ತಿಯಾಗಿದ್ದರು ಎಂದು ಕನ್ನಡ ಉಪನ್ಯಾಸಕರೂ ಆಗಿರುವ ಸಾಹಿತಿ ಜೆಂಬಿಗಿ ಮೃತ್ಯುಂಜಯ ಕಂಬನಿ ಮಿಡಿದಿದ್ದಾರೆ.

ತಾಳ್ಮೆ, ವೈಚಾರಿಕತೆಯಿಂದ ಪ್ರತಿಮಾ ಸಭಾವನ್ನು ಕಟ್ಟಿ ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು.

ತಮ್ಮ ಜೀವನದಲ್ಲಿ ಪ್ರತಿಯೊಂದರಲ್ಲೂ ಸಂತೋಷ ಕಂಡಿದ್ದ ಅವರು ಬಹು ದೊಡ್ಡ ಮಟ್ಟಕ್ಕೆ ಬೆಳೆದಿದ್ದರು. ತಮ್ಮ ಅನುಭವ ಹಾಗೂ ಜೀವನಧಾರೆಯ ಕಂಡುಂಡ ಸತ್ಯವನ್ನು ಶಿಷ್ಯರಿಗೆ ಧಾರೆಯೆರೆದಿದ್ದಾರೆ. ಕನ್ನಡಮ್ಮನ ಸೇವೆ ಮಾಡಿದ್ದಾರೆ. ತಮ್ಮ ಬಳಿ ಬರುವವರಿಗೆ ಸಲಹೆ ಸೂಚನೆ ಮಾರ್ಗದರ್ಶನ ಮಾಡಿ ಸ್ಪೂರ್ತಿ ತುಂಬಿದ್ದರು ಎಂದು ಜೆಂಬಿಗಿ ಮೃತ್ಯುಂಜಯ ತಿಳಿಸಿದರು.

ಸಮಾಜ, ಸಾಹಿತ್ಯ ಸೇವೆಯನ್ನು ಮಾಡುತ್ತಾ ಗಟ್ಟಿತನದಿಂದ ಬಾಳಿ ಬದುಕಿದ್ದರು. ಯಾವುದೇ ಅಪೇಕ್ಷೆ ಇಲ್ಲದೇ ಸಮಾಜ ಸೇವಾಕಾರ್ಯಕ್ಕೆ ತಮ್ಮನ್ನು ಸಂಪೂರ್ಣ ಅರ್ಪಿಸಿಕೊಂಡಿದ್ದರು. ಈಗ ನಮ್ಮಿಂದ ದೂರವಾಗಿ ಮರಳಿ ಬಾರದ ಲೋಕಕ್ಕೆ ಪಯಣ ಬೆಳೆಸಿದ್ದಾರೆ. ಅವರ ಆತ್ಮಕ್ಕೆ ದೇವರು ಶಾಂತಿ ನೀಡಲಿ ಎಂದು ಜೆಂಬಿಗಿ ಮೃತ್ಯುಂಜಯ ಪ್ರಾರ್ಥಿಸಿದ್ದಾರೆ.

# ಚಳ್ಳಕೆರೆ : ನಾಳೆ ಅಸ್ತಮಾಕ್ಕೆ ಔಷಧಿ ವಿತರಣೆ

ಚಳ್ಳಕೆರೆ, ಜೂ.6- ಇಲ್ಲಿನ ಈದ್ಗಾ ಮೈದಾನದ ಹಿಂಭಾಗದ ಡಾ.ಎಚ್.ಸಿ. ತಿಪ್ಪೇಸ್ವಾಮಿ ಅವರ ಮನೆಯಲ್ಲಿ ನಾಡಿದ್ದು ದಿನಾಂಕ 8ರ ಶನಿವಾರ ಬೆಳಗ್ಗೆ 6.44ಕ್ಕೆ ಮೃಗಶಿರಾ ಮಳೆ ಕೂಡುವ ಕಾಲಕ್ಕೆ ಅಸ್ತಮಾ ರೋಗಕ್ಕೆ ಔಷಧಿ ಕೊಡಲಾಗುತ್ತದೆ. ವಿವರಕ್ಕೆ ಸಂಪರ್ಕಿಸಿ ; 9449822224.

## ಡಾ. ಎಂ.ಜಿ.ಈಶ್ವರಪ್ಪನವರಿಗೆ ಸಂತಾಪ

ದಾವಣಗೆರೆ, ಜೂ.6- ಜಾನಪದ ಜಂಗಮ, ಸಾಂಸ್ಕೃತಿಕ ರೂವಾರಿಯಾಗಿದ್ದ ಡಾ.ಎಂ.ಜಿ. ಈಶ್ವರಪ್ಪನವರ ನಿಧನಕ್ಕೆ ಹಿರಿಯ ಪತ್ರಕರ್ತ ಎಚ್.ಬಿ ಮಂಜುನಾಥ್ ಸಂತಾಪ ವ್ಯಕ್ತಪಡಿಸಿದ್ದಾರೆ.

## ಡಾ. ಈಶ್ವರಪ್ಪ ನಿಧನಕ್ಕೆ ರುದ್ರಮುನೀಶ್ವರ ಶೋಕ

ದಾವಣಗೆರೆ, ಜೂ.6- ಜಾನಪದ ವಿದ್ವಾಂಸ ಡಾ.ಎಂ.ಜಿ. ಈಶ್ವರಪ್ಪ ಅವರ ನಿಧನದಿಂದ ಕನ್ನಡ ಸಾರಸ್ವತ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ನಗರಸಭೆ ನಿವೃತ್ತ ನೌಕರ ರುದ್ರಮುನೇಶ್ವರ ಅವರು ಸಂತಾಪ ಸೂಚಿಸಿದ್ದಾರೆ.

# ಅಂಕಗಳ ಬಗ್ಗೆ ಎನ್.ಟಿ.ಎ. ಸ್ಪಷ್ಟನೆ

(1ನೇ ಪುಟದಿಂದ) ಹಿನ್ನೆಲೆಯಲ್ಲಿ ಹೆಚ್ಚುವರಿ ಅಂಕ ನೀಡಲಾಗಿದೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಹೆಚ್ಚು ಅಂಕಗಳು ದೊರೆತಿವೆ ಎಂದು ಹೇಳಿದೆ.

ಪರೀಕ್ಷೆ ನಡೆಸುವ ಸಂದರ್ಭದಲ್ಲಿ ಸಮಯ ಪೋಲಾದ ಬಗ್ಗೆ ದೂರುಗಳು ಬಂದಿದ್ದವು. ಈ ಹಿನ್ನೆಲೆಯಲ್ಲಿ ನಾರ್ಮಲೈಸೇಷನ್ ಸೂತ್ರದ ಅನ್ವಯ ಹಾಗೂ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಅನ್ವಯ ಹೆಚ್ಚುವರಿ ಅಂಕಗಳನ್ನು ನೀಡಲಾಗಿದೆ ಎಂದು ಎನ್.ಟಿ.ಎ. ತಿಳಿಸಿದೆ.



## ಉಮೇಶ್ ಎಸ್. ನಿಧನ

ದಾವಣಗೆರೆ ವಿನೋಬನಗರ
1ನೇ ಮೇನ್, 7ನೇ ಕ್ರಾಸ್ ವಾಸಿ

**ಶ್ರೀ ಉಮೇಶ್ ಎಸ್.**

(ದಿ.ನಾಗೂರು ಶಂಬಣ್ಣ ಮತ್ತು ದಿ. ಮಹದೇವಮ್ಮ ಇವರ ಪುತ್ರ) ಇವರು ದಿನಾಂಕ 06.06.2024ರ ಗುರುವಾರ ಸಂಜೆ 5ಕ್ಕೆ ನಿಧನರಾದರು. ಮೃತರು ಲಯನ್ಸ್ ಕ್ಲಬ್ ಪ್ರಾಂತೀಯ ಅಧ್ಯಕ್ಷ ಎಸ್. ಓಂಕಾರಪ್ಪ ಅವರ ಸಹೋದರ.

ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 7.6.2024ರ ಶುಕ್ರವಾರ ಮಧ್ಯಾಹ್ನ 11 ಕ್ಕೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ಸಹೋದರರು : **ಎಸ್. ಓಂಕಾರಪ್ಪ, ಎಸ್. ರಾಜು,** ಸಹೋದರಿ : **ಎಸ್. ಮಂಜುಳಾ**

**ದುಃಖತಪ್ತ ಕುಟುಂಬ ವರ್ಗ, ಮೊ : 97400 93863**

# ವಾಲ್ಮೀಕಿ ನಿಗಮದ ಹಗರಣ : ಸಚಿವ ನಾಗೇಂದ್ರಗೆ ತಲೆದಂಡ

(1ನೇ ಪುಟದಿಂದ) ರಾಜೀನಾಮೆ ಪತ್ರವನ್ನು ಮುಖ್ಯಮಂತ್ರಿ ಅವರು ರಾಜಭವನಕ್ಕೆ ರವಾನೆ ಮಾಡಿದ್ದಾರೆ. ಯೂನಿಯನ್ ಬ್ಯಾಂಕ್ ನೀಡಿದ ದೂರಿನ ಆಧಾರದ ಮೇಲೆ ಸಿಬಿಐ ತನಿಖೆ ಆರಂಭಿಸಿತ್ತು. ಈ ಸಂಬಂಧ, ಬ್ಯಾಂಕ್‌ನ ಅಧಿ ಕಾರಿಗಳು ಹಾಗೂ ಜನಪ್ರತಿನಿಧಿಗಳ ಮೇಲೆ ಎಫ್‌ಐಆರ್ ದಾಖಲು ಮಾಡಿಕೊಂಡಿತ್ತು.

ಎಫ್‌ಐಆರ್ ದಾಖಲು ಮಾಡಿಕೊಂಡು ಇಲಾಖಾ ಹೊಣೆ ಹೊತ್ತ ಸಚಿವರಿಗೆ ನೋಟಿಸ್ ನೀಡಿ ವಶಕ್ಕೆ ಪಡೆಯುತ್ತಾರೆ ಎಂಬ ಮಾಹಿತಿ ಬರುತ್ತಿದ್ದಂತೆ, ಮುಖ್ಯಮಂತ್ರಿ ಅವರು ನಿನ್ನೆ ರಾತ್ರಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರನ್ನು ಸರ್ಕಾರಿ ನಿವಾಸ ಕಾವೇರಿಗೆ ಕರೆಸಿಕೊಂಡು ಈ ಸಂಬಂಧ ಚರ್ಚೆ ಮಾಡಿದರು. ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸುತ್ತಿರುವ ಎಸ್‌ಐಟಿ ಅಧಿಕಾರಿಗಳಿಂದ ಪ್ರಾಥಮಿಕ ಮಾಹಿತಿ ಮತ್ತು ವಿವರಣೆ ಪಡೆದ ನಂತರ ಸಚಿವರ ರಾಜೀನಾಮೆ ಪಡೆಯುವ ನಿರ್ಧಾರಕ್ಕೆ ಬಂದರು.

ತಕ್ಷಣವೇ ನಾಗೇಂದ್ರ ಅವರನ್ನು ಕರೆಸಿ ಕೊಂಡ ಮುಖ್ಯಮಂತ್ರಿಗಳು, ನಿಗಮದ ಹಣ ವರ್ಗಾವಣೆ ಪ್ರಕರಣವನ್ನು ಸಿಬಿಐ ಕೈಗೆತ್ತಿ ಕೊಂಡಿರುವುದರಿಂದ ನೀವು ತಾತ್ಕಾಲಿಕವಾಗಿ ಸಂಪುಟದಿಂದ ಹೊರಗಿರಿ ಎಂದು ತಿಳಿಸಿದ್ದಾರೆ. ತನಿಖೆ ಪೂರ್ಣಗೊಂಡು ಸತ್ಯಾಸತ್ಯತೆ ಹೊರಬಂದ ನಂತರ ನಿಮ್ಮನ್ನು ಮತ್ತೆ ಮಂತ್ರಿ ಮಾಡುತ್ತೇವೆ, ಅಲ್ಲಿಯವರೆಗೂ ರಾಜೀನಾಮೆ ನೀಡಿ ಎಂದು ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಸಲಹೆ ಮಾಡಿದರು. ನಂತರ ನಾಗೇಂದ್ರ, ತಮ್ಮ ಆಪ್ತರೊಂದಿಗೆ ಸಮಾಲೋಚನೆ ನಡೆಸಿ, ಇಂದು ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ, ತಮ್ಮ ರಾಜೀನಾಮೆ ಪತ್ರ ಸಲ್ಲಿಸಿದರು.


ನಾಗೇಂದ್ರ ರಾಜೀನಾಮೆ ಸಲ್ಲಿಸುತ್ತಿದ್ದಂತೆ, ಸುದ್ದಿಗಾರರೊಂದಿಗೆ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪಕ್ಷ ಹಾಗೂ ಸರ್ಕಾರದ ಘನತೆಗೆ ಧಕ್ಕೆ ಆಗಬಾರದು ಎಂಬ ಕಾರಣಕ್ಕೆ ಅವರು ಸ್ವಯಂಪ್ರೇರಿತರಾಗಿ ರಾಜೀನಾಮೆ ನೀಡಿದ್ದಾರೆ ಎಂದರು.

## ‘ಹಮಾರೆ ಬಾರಾಹ್’ ಮೇಲೆ ನಿಷೇಧ

ದಾವಣಗೆರೆ, ಜು. 6 - ‘ಹಮಾರೆ ಬಾರಾಹ್’ ಚಿತ್ರದ ಟ್ರೈಲರ್ ಹಾಗೂ ಸಿನಿಮಾದ ಮೇಲೆ ನಿಷೇಧ ಹೇರಲಾಗಿದೆ ಎಂದು ಜಿಲ್ಲಾ ಪೊಲೀಸ್ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ರಾಜ್ಯ ಸರ್ಕಾರ ಈ ಚಿತ್ರದ ಬಿಡುಗಡೆ ಮೇಲೆ ನಿಷೇಧ ಹೇರಿದೆ. ಈ ಚಿತ್ರ ಹಾಗೂ ಟ್ರೈಲರ್ ಅನ್ನು ಯಾವುದೇ ಎಲೆಕ್ಟ್ರಾನಿಕ್ ಮಾಧ್ಯಮ / ಸಾಮಾಜಿಕ ಜಾಲತಾಣ / ಸಿನಿಮಾ ಮಂದಿರಗಳು / ಖಾಸಗಿ ಟಿವಿ ಚಾಲನ್ ಗಳು / ಇತರೆ ಮಾಧ್ಯಮಗಳ ಮೂಲಕ ಪ್ರಸಾರ ಮಾಡದಂತೆ ಜಿಲ್ಲಾಧಿಕಾರಿಗಳು ಆದೇಶಿಸಿದ್ದಾರೆ.

ಯಾರಾದರೂ ಪ್ರಸಾರ ಮಾಡಿದಲ್ಲಿ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ. ಮುಂದಿನ ಎರಡು ವಾರ ಇಲ್ಲವೇ ಮುಂದಿನ ಆದೇಶ ಹೊರಡಿಸುವವರೆಗೆ ನಿಷೇಧ ಜಾರಿಯಲ್ಲಿರಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.














# ಕನ್ನಡವಂ ದಿಟದಿ ಮನಂಗೈದು ಬೋಧಿಸಿದ ಬೃಂದಾರವಿಂದ ಡಾ. ಈಶ್ವರಪ್ಪ

'ಕಾಮ್ ಜ್ಞಾನ್ ನೇ ಕಿಯಾ ಜೋ ಕಾಮ್ ಆಂಧೀ ಕರ್‌ನಾ ಸಕ್ತೀ' : ಬಿರುಗಾಳಿ ಎಸಗದಿಹ ಕಾರ್ಯವನು ಜ್ಞಾನ ತಾನೆಸಗಿಹುದು' ಎಂಬ ಉಕ್ತಿ ಎಂತಹ ವಿಷಮ ಸಮಯದಲ್ಲಿಯೂ ಜಾಗೃತಗೊಳಿಸಬಲ್ಲದು. ಸಾವಧಾನತೆಯೇ ಪರಾಕ್ರಮದ ಉತ್ತಮ ತರಹದ ಅಂಶ (Discration is the better part of valour) ವನ್ನು ಗಣನೆಗೆ ತರುವಲ್ಲಿ ಮಾನವನ ಶ್ರೇಷ್ಠತೆಯ ಅಂತ್ಯ ಕ್ರಿಯೆಯಲ್ಲಿಯಲ್ಲ ಜ್ಞಾನದಲ್ಲಿ ಎನ್ನುವುದನ್ನು (The Great end of life is not action but knowledge) ತಿಳಿಸುತ್ತಾ, ಕಲ್ಪ ಕಲ್ಪಗಳಿಂದ ಸುತ್ತುತ್ತಿರುವ ಸೂರ್ಯನಾನುಭವ, ಉರಿಯೆಡೆಗೆ ಚಿಟ್ಟೆಯನ್ನು ಸೆಳೆವ ಪ್ರೇಮದ ಆಯಸ್ಕಾಂತವನ್ನು, ಕಾಡು ಹಳ್ಳಿಯೊಂದರ ಮಣ್ಣಿನ ಮಕ್ಕಳ, ಅವರ ಹಬ್ಬ-ಹರಿದಿನಗಳ, ಅವರ ಒಡನಾಟ, ಅಲ್ಲಿನ ಕಾಡು, ಆ ಕಾಡಿನ ಪ್ರಾಣಿ-ಪಕ್ಷಿಗಳ, ಸಾಮೀಪ್ಯ, ಇವು ಆ ಮಣ್ಣು ಹಡೆದ ಒಡಲಿಗೆ, ಭಾವಕೋಶವಾಗಿ ಪರಿಣಮಿಸಿದ ಪರಿಭಾವನೆಯ ಪರಿಜು ಪುತ್ಥಳಿಯೇ ಡಾ. ಎಂ.ಜಿ. ಈಶ್ವರಪ್ಪನವರು.

ಕರ್ನಾಟಕದ ರಾಜಕೀಯ ಇತಿಹಾಸ ಕ್ರಿ.ಶ.ಪೂ. 3ನೇ ಶತಮಾನದ ಶಾತವಾಹನರ ಕಾಲದಿಂದ ಆರಂಭವಾದರೂ ಶೈಕ್ಷಣಿಕ ಇತಿಹಾಸ 4ನೇ ಶತಮಾನದ ಹಿಂದೆ ಜ್ಞಾನಕ್ಕಾಗಿಯೇ ಜೀವನವನ್ನು ಮೀಸಲಾಗಿಟ್ಟಿದ್ದ ವಿದ್ವಜ್ಜನರು, ಸಾಧು-ಸಂತರು ತಮ್ಮ ಗುಡಿಗಳಲ್ಲೋ, ವಾನಾಂತರ ಪ್ರದೇಶದ ತಮ್ಮ ಆಶ್ರಮಗಳಲ್ಲೋ ಒಲಿದು ಬಂದ ಜ್ಞಾನದಾಹಿಗಳಿಗೆ ಉಚಿತವಾಗಿ ಶಿಕ್ಷಣವೀಯುತ್ತಿದ್ದರು. ಶಿಕ್ಷಣವನ್ನು ಸಾರ್ವತ್ರೀಕರಿಸಿ ಜಾತಿ, ಪದ್ಧತಿ, ಮತ, ಲಿಂಗ, ಯಾವ ಭೇದವೂ ಇಲ್ಲದೆಯೇ ಎಲ್ಲರಿಗೂ ಜ್ಞಾನವನ್ನು ನೀಡುತ್ತಿದ್ದುದು ಇತಿಹಾಸ ಸಾಕ್ಷಿಯಾಗಿದೆ. ಶಿಕ್ಷಕರು ಅಂದು ಮಬ್ಬಿಗೆ ಸಾಣೆ ಹಿಡಿದು; ಹೃದಯಕ್ಕೆ ವಿಚಾರಧಾರೆಯನ್ನು ಅದು ಎಲ್ಲಿಯೇ ಇರಲಿ, ಯಾರಲ್ಲಿಯೇ ಇರಲಿ, ಕಾಣುವ ವಿಶಾಲ ಗ್ರಾಸವನ್ನು ಗುರುತಿಸುವ ಔದಾರ್ಯವನ್ನು ಹಾಗೂ ಯೋಗ್ಯತೆ, ಸಾಮರ್ಥ್ಯ, ದೌರ್ಬಲ್ಯಗಳನ್ನು ಅರ್ಥ ಮಾಡಿಕೊಳ್ಳಬಲ್ಲವರಾಗಿದ್ದು, ಪ್ರೀತಿ, ವಿನೋದ, ಸಹಾಯ, ಸೌಜನ್ಯಗಳಿಂದ ಒಲಿಸಿಕೊಂಡು ಬೋಧಿಸುವುದರಲ್ಲಿ ಡಾ. ಎಂ.ಜಿ. ಈಶ್ವರಪ್ಪನವರು ಶ್ರಮಿಕರಾಗಿದ್ದರು.

ಈಶ್ವರಪ್ಪನವರು ಸಮಾಜದ ತರ್ಕ ಹಾಗೂ ವ್ಯಾಜ್ಯ ಪ್ರತಿಭಟನೆಗಳಲ್ಲಿ ಪ್ರವೇಶಿಸಿದರೂ ಪ್ರಶಾಂತ ಮನಸ್ಕರಾಗಿ, ಸತ್ಸಂಗ, ಆತ್ಮ ವಿಮರ್ಶೆ, ಅಂತರ್ಮುಖಿಗಳಿಂದ ಸುಸಂಸ್ಕೃತ (Introvert Culture) ರಾಗಿ, ಸಾಧುಗಳಂತಿದ್ದು, ತಲಸ್ಪರ್ಶಿಯಾದ ಪಾಂಡಿತ್ಯಕ್ಕೆ ಸಾಕ್ಷಿಯಾದಂತೆ, ಸಾಕಾರ ಮೂರ್ತಿಗಳಾಗಿ, ಜಂಗಮಿಗಳಾಗಿ, ಕ್ಲುಪ್ತ ಕಾಲದಲ್ಲಿ ಉತ್ಸವ ಭರಿತರಾಗಿ, ನಿರ್ಬಂಧದ ಸಂಕೋಲೆಗಳಿಂದ ಕಳಚಿಕೊಂಡು, ಸರಳವಾಗಿ, ಔಚಿತ್ಯಗಳನ್ನರಿತುಕೊಂಡು ಜನನ-ಮರಣ ಯಮಳಗಳನ್ನು ಮೆಟ್ಟಿ ನಿಂತು, ಹೂವು-ಹೂವೇ, ಎಲೆಯೋ!-ಸೇರಿ-ಬೆಳೆಸಿ, ಪರಿಮಳ ತೂಕವನ್ನು ಮೋಡ ಮೋಡವಾಗಿ, ತುಂಡು:ತುಂಡಾಗಿ ಗಾಳಿಗೆ ಹೋಗದಂತೆ ಸಮಸ್ಕ ಕ್ರಮದಲ್ಲಿ, ಶಿಕ್ಷಣ ಕ್ಷೇತ್ರದ ಅತ್ಯುತ್ಸಾಹ ಉಬ್ಬಿನಲ್ಲಿ ಮನೋವೃತ್ತಿಯನ್ನು ಬೆಳೆಸಿಕೊಂಡವರು.

ಎಂ.ಜಿ.ಯವರು ಶಿಷ್ಯನನ್ನು ಕುರಿತು ಏಳು! ಮನಸ್ಸನ್ನು ಗಟ್ಟಿ ಮಾಡಿಕೊಂಡು ಮುಂದಿನ ಕೆಲಸದಲ್ಲಿ ಪ್ರವೃತ್ತನಾಗು, ಯಾರ ಮನಸ್ಸನ್ನು ನೋಯಿಸಬಾರದು, ಎಲ್ಲರನ್ನೂ ಸಂತೋಷ ಪಡಿಸಬೇಕು ಎನ್ನುವುದು ಜೀವನದ ಮುಖ್ಯ ಸೂತ್ರವಾಗಬೇಕು. ಇದರ ಜೊತೆಗೆ ಗೌರವ, ಭಕ್ತಿ, ನಮ್ರತೆ, ವಿಶ್ವಾಸ, ಆದರ, ಸ್ನೇಹ, ವಾತ್ಸಲ್ಯ, ಮಮತೆ ಇವುಗಳನ್ನು ನಿರ್ಮಿಸಿಕೊಂಡು ಆತ್ಮೀಯತೆಯನ್ನು ಸಂಪಾದಿಸಬೇಕೆಂದು ತಿದ್ದಿ-ತೀಡಿ-ತೇದು ತೊಡವಾಗುವಂತೆ ಹೇಳುವ ಸ್ವಾತಂತ್ರ್ಯ ಇವರಿಗೆ ಮಾತ್ರ ಸಾಧ್ಯ. ಸ್ನೇಹ-ಸಾಧುತ್ವ ಹೊಂದಿಕೆಗಳಿಂದ ಸರಿ ಹೋದರೆ ಹೋಗಲಿ, ಅಪ್ರಿಯವಾದ ರೀತಿಯಲ್ಲಿ ವರ್ತಿಸಿ ದುಷ್ಟರನ್ನು ತಿದ್ದುವುದು ಅನಾವಶ್ಯಕವೆಂದು ತಿಳಿದವರು. ಕಾಲಿಗೆ ಮುಳ್ಳು ಚುಚ್ಚಿದರೆ ಅದು ಹಾಗೆಯೇ ಕೊಳತೆ ಕರಗಿ ಹೋಗಲಿ. ಅದನ್ನು ಸೂಜಿಯಿಂದ ಚುಚ್ಚಿ ತೆಗೆದು ಕಾಲು ನೋಯಿಸಿಕೊಳ್ಳುವುದು ಸರಿಯಲ್ಲವೆಂದು ಹೇಳುವ ಪ್ರವೃತ್ತಿಯವರು. ಅನೇಕತೆಯಲ್ಲಿ ಏಕತೆ (Units of Multi City) ಯನ್ನು, ಏಕತೆಯಲ್ಲಿ ಅನೇಕತೆ (Multi City of Units) ಯನ್ನು ಮನೋಹರ ಬಿಳುಪು ಬಣ್ಣಗಳಿಂದ ಸುತ್ತುವರಿದು ವಿಭಾವಗಳ ಕ್ರಿಯಾ ವಿಧಾನವನ್ನು ನಿಷ್ಪಕ್ಷಪಾತ (Disinterestedness) ವಾಗಿ ಸ್ಪಷ್ಟಗೊಳಿಸುವುದರಲ್ಲಿ ಪ್ರಮಥರು.



**ಸ್ಮರಣೆ, ತಿಳುವಳಿಕೆಯ ಇರಾದೆ, ಸೂಕ್ತವಾದ ಉತ್ತರವನ್ನು ಕಂಡುಕೊಳ್ಳುವ ಪ್ರವೃತ್ತಿ ಮತ್ತು ಪರಸ್ಪರ ಸಂಬಂಧ ಮಾಹಿತಿಗಳನ್ನು ವಿಂಗಡಿಸಿ ಅವುಗಳನ್ನು ವಿಶ್ಲೇಷಿಸಿ ಹೊಸ ವಿಚಾರಗಳಿಗೆ ನಾಂದಿ ಹಾಡುವ ಚಿಲಿಮಿಲಿಗ ಎಂ.ಜಿ.ಯವರು.**

ಶಿಕ್ಷಕ ಬುದ್ಧಿಜೀವಿ. ಈ ಜಗತ್ತಿನ ಮಿಕ್ಕೆಲ್ಲಾ ಜೀವಿಗಳಿಂದ ಈತನನ್ನು ಪ್ರತ್ಯೇಕಗೊಳಿಸಿರುವುದು ಅವನ ಬೌದ್ಧಿಕ ಶಕ್ತಿ, ತನ್ನ ಬುದ್ಧಿ ಶಾಕ್ತತೆಯಿಂದ ಇಡೀ ಮನುಕುಲವನ್ನು ನೈತಿಕ ಸ್ಥಲದ ಮೇಲೆ ರೂಪಿಸುವ ಪ್ರಗಲ್ಭನೆಂಬ ಸಾಮರ್ಥ್ಯ (Competence)ವನ್ನು, ಅಂತರ್‌ವಿನಿಮಯ ಕ್ಷಮತೆ (interchangeability)ಯನ್ನು, ವ್ಯಕ್ತಿತ್ವದ ವಿಶಿಷ್ಠತೆ(Personality in Specelization)ಯನ್ನು ಮತ್ತು ಸಾಂಸ್ಕೃತಿಕ ಪ್ರಸರಣ (Cultural Transmission) ರಕ್ತಗತವಾಗಿ ಅನುವಂಶೀಯತೀಕರಣದಿಂದ ಸಮಾಜದ, ಸಂಸ್ಕೃತಿಯ ಹಾಗೂ ಮನುಷ್ಯನ ಸಕಲ ಚಿಂತನೆಗೂ ವ್ಯವಹಾರಕ್ಕೂ ಅಗತ್ಯವಾದ ಭಾಗವಾಗಿರುತ್ತಾನೆ. ಸ್ಮರಣೆ, ತಿಳುವಳಿಕೆಯ ಇರಾದೆ, ಸೂಕ್ತವಾದ ಉತ್ತರವನ್ನು ಕಂಡುಕೊಳ್ಳುವ ಪ್ರವೃತ್ತಿ ಮತ್ತು ಪರಸ್ಪರ ಸಂಬಂಧದ ಮಾಹಿತಿಗಳನ್ನು ವಿಂಗಡಿಸಿ ಅವುಗಳನ್ನು ವಿಶ್ಲೇಷಿಸಿ ಹೊಸ ವಿಚಾರಗಳಿಗೆ ನಾಂದಿ ಹಾಡುವ ಚಿಲಿಮಿಲಿಗ ಎಂ.ಜಿ.ಯವರು.

ವಿದ್ಯಯಾ ಅಮೃತಮಶ್ನುತೇ-ವಿದ್ಯೆಯಿಂದ ವ್ಯಕ್ತಿಯು ಅಮರತ್ವವನ್ನು ಸಾಧಿಸಬಲ್ಲ. ಸುಸಜ್ಜಿತ ರೀತಿಯಲ್ಲಿ ಕ್ರಿಯಾ ಪ್ರಾಪ್ತವಾಗುವಂತೆ ಕ್ರಮಯುಕ್ತವಾಗಿ, ಕಾಲೋಚಿತವಾಗಿ, ಸಂಯೋಜಿತವಾಗಿ, ಪ್ರತಿಕಂಪಿಸುವ ವೀಣೆಯುಜ್ವಲ ತಂತ್ರಿಯಂತೆ ಮೊಳಗಿದಾಗ, ಜ್ಞಾನಾಂಭರವನ್ನು ಕಾಣಲು ಸಾಧ್ಯವೆಂದು ಹಾಗೂ ಸಮಾಜ ಜೀವನವು ಪರಿಶುದ್ಧವಾಗಬೇಕಾದರೆ ಸತ್ಯದ ಜೊತೆಯಲ್ಲಿ ಅಹಿಂಸೆ, ಕಾರ್ಯಶ್ರದ್ಧೆ, ಸ್ನೇಹಪರತೆ, ಅನುಕಂಪೆ, ಸಹಿಷ್ಣತೆ, ಸಹೃದಯಭಾವ, ಪರೋಪಕಾರ ಗುಣ, ಮೊದಲಾದ ಸದ್ಗುಣಗಳನ್ನು ಅಳವಡಿಸಿಕೊಳ್ಳುವುದು ಅತ್ಯಗತ್ಯವೆಂದು, ವಿಶ್ವದ ದೃಷ್ಠಿಯಲ್ಲಿ ಪ್ರಾಣಿ ವರ್ಗಕ್ಕಿಂತ ಮನುಷ್ಯ ಕುಲವು ಕೆಲವು ಶ್ರೇಷ್ಠವಾದ ಗುಣಗಳಿಂದ ಕೂಡಿದ್ದು, ಪ್ರಾಣಿಗಳಲ್ಲಿಲ್ಲದಿರುವ ಸೂಕ್ಷ್ಮ ದೃಷ್ಟಿ (Micro Approach), ಸ್ಥೂಲದೃಷ್ಠಿ (Macro Approach), ಬಾಹ್ಯತೆ ಅರಿವು (Special Awareness) ಆಯಸ್ಕಾಂತೀಯ ತರಂಗ ಚಿತ್ರದಾಯಕ (Magnetic Resonance Immaging), ಆಂತಿಕ ಮನೋಮಯಸ್ಥಿತಿ (Internal Psychological States of the mind) ಗಾತ್ರ ಮತ್ತು ತೂಕ (Size and weight) ಇತ್ಯಾದಿಗಳನ್ನೊಳಗೊಂಡ ಯೋಗ್ಯನಾದ ವ್ಯಕ್ತಿ ತಾನು ಸುಖವಾಗಿ, ಸಂತೋಷವಾಗಿ ಬದುಕಿ, ತನ್ನ ನೆರೆ-ಹೊರೆಯವರನ್ನು ಸುಖಿ, ಸಂತೋಷವಾಗಿ ಬದುಕಲು ಚಲನಶೀಲಗತಿಕನಾಗುತ್ತಾನೆ ಎಂಬ ವಿಚಾರಗಳನ್ನು ಎಂ.ಜಿ. ಯವರು ತರಗತಿಗಳಲ್ಲಿ ಸಿದ್ಧ ಮಾದರಿಯನ್ನು ಮುರಿದು ಕಟ್ಟುವ ಮತ್ತು ವರ್ತಮಾನಕ್ಕೆ ಮುಖಾಮುಖಿಯಾಗಿಸುವ ನವೀನ ಕ್ರಮ, ಹೊಸ ಹುಡುಕಾಟ, ಸಮಕಾಲೀನ ಜ್ವಲಂತ ಸಮಸ್ಯೆಗಳನ್ನು ಜತನವಾಗಿಸಿಕೊಂಡು ಅಕ್ಷರಶಕ್ತಿ-ಶಬ್ದ ಶಕ್ತಿಯನ್ನು ಕಾಲೋಚಿತಗೊಳಿಸುವ ವೈಖರಿ ಬುದ್ಬುದಾದ್ಭುತ.

18 ಪುಸ್ತಕಗಳನ್ನು ರಚಿಸಿ ರಂಗಕರ್ಮಿಯಾಗಿ ಶೈಕ್ಷಣಿಕ ಕ್ಷೇತ್ರಕ್ಕೆ ಅದಮ್ಯರಾಗಿ ಪ್ರಥಮರಾದವರು. ಕನ್ನಡದ ಮೇರು ವ್ಯಕ್ತಿತ್ವದವರಾಗಿದ್ದ ಈಶ್ವರಪ್ಪ ಅವರು ದಿನಾಂಕ 01-06-2024 ರಂದು ಇಹಲೋಕದೂರಿಕೃತರಾದದ್ದು ಕನ್ನಡ ಭಾಷೆಗೆ ಮತ್ತು ಸಾಹಿತ್ಯಕ್ಕೆ ತುಂಬಲಾಗದ ಕಂಪಿತ.

**- ಪ್ರೊ॥ ಬಾತಿ ಬಸವರಾಜ್**, ಶೈಕ್ಷಣಿಕ ಸಲಹೆಗಾರರು, ದವನ ಕಾಲೇಜು, ದಾವಣಗೆರೆ. 88845 27130

## ಶೇ. 93ರಷ್ಟು ನೂತನ ಸಂಸದರು ಕೋಟ್ಯಾಧೀಶರು

ನವದೆಹಲಿ, ಜು. 6 – ಲೋಕಸಭಾ ಚುನಾವಣೆಯಲ್ಲಿ ಗೆದ್ದಿರುವವರ ಪೈಕಿ ಶೇ.93ರಷ್ಟು ಜನರು ಕೋಟ್ಯಾಧೀಶರಾಗಿದ್ದಾರೆ ಎಂದು ಎ.ಡಿ.ಆರ್. ಸಂಸ್ಥೆ ರೂಪಿಸಿರುವ ವರದಿ ತಿಳಿಸಿದೆ.

ಟಿ.ಡಿ.ಪಿ.ಯ ಚಂದ್ರಶೇಖರ ಪೆಮ್ಮಸಾನಿ ಅವರ ಆಸ್ತಿ ಮೌಲ್ಯ 5,705 ಕೋಟಿ ರೂ. ಆಗಿದೆ. ಅವರು ಆಂಧ್ರ ಪ್ರದೇಶದ ಗುಂಟೂರು ಕ್ಷೇತ್ರದಿಂದ ಗೆದ್ದಿದ್ದಾರೆ. ಸಾಲದ ವಿಷಯದಲ್ಲೂ ಪೆಮ್ಮಸಾನಿ ಸಂಸದರ ಪೈಕಿ ಮೊದಲ ಸ್ಥಾನದಲ್ಲಿದ್ದಾರೆ. ಅವರ ಸಾಲದ ಮೊತ್ತ ,1038 ಕೋಟಿ ರೂ. ಆಗಿದೆ.

ಬಿಜೆಪಿಯ ಕೊಂಡ ವಿಶ್ವೇಶ್ವರ ರೆಡ್ಡಿ 4,568 ಕೋಟಿ ರೂ.ಗಳ ಮಾಲೀಕರಾಗಿದ್ದಾರೆ. ಅವರು ತೆಲಂಗಾಣದ ಚೆವೆಲ್ಲ ಕ್ಷೇತ್ರದಲ್ಲಿ ಗೆದ್ದಿದ್ದಾರೆ. ಹರಿಯಾಣದ ಕುರುಕ್ಷೇತ್ರದಿಂದ ಗೆದ್ದಿರುವ ಬಿಜೆಪಿಯ ನವೀನ್ ಜಿಂದಾಲ್ ಆಸ್ತಿ ಮೌಲ್ಯ 1,241 ಕೋಟಿ ರೂ. ಆಗಿದೆ.

543 ಸಂಸದರ ಪೈಕಿ 504 ಸಂಸದರು ಕೋಟ್ಯಾಧೀಶರಾಗಿದ್ದಾರೆ. ಕಳೆದ ಚುನಾವಣೆಯಲ್ಲಿ ಶೇ.88ರಷ್ಟು ಸಂಸದರು ಕೋಟ್ಯಾಧೀಶರಾಗಿದ್ದರು.

ಬಿಜೆಪಿಯ ಜ್ಯೋತಿರ್ಮಯ್ ಸಿಂಗ್ ಮಹತೋ ಅವರ ಆಸ್ತಿ ಕೇವಲ 5 ಲಕ್ಷ ರೂ. ಆಗಿದೆ. ಅವರು ಪಶ್ಚಿಮ ಬಂಗಾಳದ ಪುರುಲಿಯಾದಿಂದ ಗೆದ್ದಿದ್ದಾರೆ. ತೃಣಮೂಲ ಕಾಂಗ್ರೆಸ್‌ನ ಮಿತಲಿ ಬಾಗ್ ಅವರ ಆಸ್ತಿ ಮೌಲ್ಯ 7 ಲಕ್ಷ ರೂ. ಆಗಿದ್ದು, ಅವರು ಪಶ್ಚಿಮ ಬಂಗಾಳದ ಆರಂಬಾಗ್ ಕ್ಷೇತ್ರದಿಂದ ಗೆದ್ದಿದ್ದಾರೆ.

## ದಾವಣಗೆರೆಯ ಸಾಂಸ್ಕೃತಿಕ ಚೇತನ ಡಾ. ಈಶ್ವರಪ್ಪ

ಒಮ್ಮೆ ಸಿರಿಗೆರೆಯಲ್ಲಿ ಮೈಸೂರು ಮಲ್ಲಿಗೆಯ ಕವಿ ಡಾ. ಕೆ.ಎಸ್. ನರಸಿಂಹ ಸ್ವಾಮಿಯವರಿಗೆ ಅಭಿನಂದನಾ ಸಮಾರಂಭ. ಕವಿಯನ್ನು ಕುರಿತು ಅಭಿನಂದನಾ ಭಾಷಣ ಮಾಡಲು ಬೆಂಗಳೂರಿನ ಮತ್ತೋರ್ವ ಹೆಸರಾಂತರು ಆಗಮಿಸಿದ್ದರು. ಅವರ ನೀರಸ ಅಭಿನಂದನಾ ಭಾಷಣ ಬಹುಪಾಲು ವಿದ್ಯಾರ್ಥಿಗಳೇ ಇದ್ದ ಸಭೆಯಲ್ಲಿ ಬೇಸರ, ತೂಕಡಿಕೆ ತರುವಂತಿತ್ತು. ಆಗ ಕಾರ್ಯಕ್ರಮ ನಿರೂಪಕನಾಗಿದ್ದ ನಾನು, ಆ ಭಾಷಣಕಾರರಿಗೆ ಸಮಯದ ಕೊರತೆಯನ್ನು ತಿಳಿಸಿ, ಮುಂದಿನ ಭಾಷಣಕ್ಕೆ ಮುಖ್ಯ ಅತಿಥಿಗಳನ್ನು ಆಹ್ವಾನಿಸಿದೆ.

ಆಗ ಇಡೀ ಸಭೆ ಚಿತ್ತಾಕರ್ಷಕವಾಗಿ ಕುಳಿತು ಕೇಳುವಂತೆ, ಕವಿ ಕೆ.ಎಸ್.ನ. ಅವರ ಬದುಕು, ಬರಹ ಕುರಿತ ಮನಮುಟ್ಟವಂತೆ ಮಾತನಾಡಿದವರು ಡಾ. ಎಂ.ಜಿ. ಈಶ್ವರಪ್ಪ. ಹೀಗೆ ಯಾವುದೇ ಸಭೆ, ಸಮಾರಂಭ, ಉಪನ್ಯಾಸವಿರಲಿ ಅಲ್ಲಿ ಸ್ಫುಟವಾದ, ಅಚ್ಚುಕಟ್ಟಾದ, ನಿರರ್ಗಳವಾದ ವಿಷಯ ಮಂಡನೆ; ಕೇಳುವವರ ಆಸಕ್ತಿ ಹೆಚ್ಚಿಸುವಂತಹ, ಕುತೂಹಲ ಮೂಡಿಸುವ ಮಾಹಿತಿಪೂರ್ಣ ಮಾತುಗಾರಿಕೆ. ಹೆಚ್ಚು ಲಂಬಿಸದ, ಸಂದರ್ಭೋಚಿತವೂ, ಗಂಭೀರವೂ ಆದ ಉದಾಹರಣೆಗಳೊಂದಿಗಿನ ವಿದ್ವತ್ಪೂರ್ಣ ಉಪನ್ಯಾಸ. ಎಲ್ಲಿಯೂ ಉದ್ವೇಗ, ಆವೇಶಗಳಿಗೆ ಅವಕಾಶವಿಲ್ಲದ ಹಿತಮಿತವಾದ ಮಾತು ಈಶ್ವರಪ್ಪನವರದು.

ವಿಜ್ಞಾನ ಪದವಿ ಕಾಲೇಜಿನಲ್ಲಿ ಭಾಷಾ ವಿಷಯ ತರಗತಿಗಳೆಂದರೆ ಅಷ್ಟಕಷ್ಟೆ. ವಿಜ್ಞಾನದ ವಿದ್ಯಾರ್ಥಿಗಳನ್ನು ಭಾಷೆ, ಸಾಹಿತ್ಯದ ಕಡೆಗೆ ಒಲವು ಮೂಡಿಸುವುದೆಂದರೆ ಕಪ್ಪೆಗಳನ್ನು ತಕ್ಕಡಿಯಲ್ಲಿಟ್ಟು ತೂಗುವ ಪ್ರಯತ್ನ. ಆದರೆ ಈ ಮಾತಿಗೆ ಅಪವಾದದಂತಿರುವುದು ಈಶ್ವರಪ್ಪನವರ ಕನ್ನಡ ಭಾಷಾ ತರಗತಿಗಳು ಎಂದರೆ ಉತ್ಪ್ರೇಕ್ಷೆಯಾಗಲಾರದು. ಸೂಜಿಗಲ್ಲಿನಂತೆ ವಿದ್ಯಾರ್ಥಿಗಳ ಮನಸ್ಸನ್ನು ಆಕರ್ಷಿಸಿ, ಪಾಠ ಮಾಡುವ ಕಲೆಗಾರಿಕೆಯಿಂದ ಇವರು ಮನೆಮಾತಾಗಿರುವವರು.

ವಿದ್ವತ್ತಿನೊಂದಿಗೆ ವಿನಯ, ಅಧ್ಯಾಪನದೊಂದಿಗೆ ಅಧ್ಯಯನ, ಆಡಳಿತದೊಂದಿಗೆ ಸಾಂಸ್ಕೃತಿಕ ಚಿಂತನೆಗಳ ಮೊತ್ತದಂತಿರುವ ಈಶ್ವರಪ್ಪನವರು ದಾವಣಗೆರೆಯ ಸಾಹಿತ್ಯ, ಸಾಂಸ್ಕೃತಿಕ ವಲಯದಲ್ಲಿ ಪ್ರಧಾನ ಹೆಸರು. ಗುಣಮಟ್ಟದ ಕಾರ್ಯ ಯೋಜನೆಗಳನ್ನು ರೂಪಿಸುವಲ್ಲಿ ಸಿದ್ಧಹಸ್ತರು.

ವಿದ್ಯಾರ್ಥಿ ದೆಸೆಯಿಂದಲೂ ರಂಗಭೂಮಿಯಲ್ಲಿ ಆಸಕ್ತಿ ಹೊಂದಿದ ಈಶ್ವರಪ್ಪನವರು ನಟನೆ ಮತ್ತು ನಿರ್ದೇಶನದಲ್ಲೂ ಸೈ ಎನಿಸಿಕೊಂಡವರು. ಅದಕ್ಕೆ ಇಂಬು ಕೊಟ್ಟದ್ದು ಕೇರಳದ ತ್ರಿಚೂರಿನ ಸ್ಕೂಲ್ ಆಫ್ ಡ್ರಾಮಾ ಮತ್ತು ಬಿ.ವಿ. ಕಾರಂತರ ಮಾರ್ಗದರ್ಶನದಲ್ಲಿ ಭೂಪಾಲ್ ಮತ್ತು ದೆಹಲಿಯಲ್ಲಿ ರಂಗಭೂಮಿಯ ತಲಸ್ಪರ್ಶಿ ಅಧ್ಯಯನ. ಅದರ ಪ್ರತಿಫಲವಾಗಿ ಮೆರವಣಿಗೆ, ಸೆಜುವಾನಿನ ಸಾಧ್ವಿ, ಕೊಡೆಗಳು, ಈಡಿಪಸ್, ಸಂಕ್ರಾಂತಿ, ಸಂತೆಯಲ್ಲಿ ನಿಂತಾನ ಕಬೀರ ಮುಂತಾದ ನಾಟಕಗಳಲ್ಲಿ ಅಭಿನಯ. ಜಾತ್ರೆ, ಸಾಯೋ ಆಟ, ಅಪ್ಪ, ಕಡೇಮನೆ ಕಡೇಗಲ್ಲಿ, ಹಳ್ಳಿಚಿತ್ರ, ಹಳ್ಳಿಮೇಷ್ಟ್ರು, ಮಾರೀಚನ ಬಂಧುಗಳು, ಇಲಿಬೋನು, ನಾಗನ ಕತೆ ಮುಂತಾದ ನಾಟಕಗಳ ನಿರ್ದೇಶನ. ಈ ಹಿನ್ನೆಲೆಯಲ್ಲಿ ದಾವಣಗೆರೆಯ ಹೆಸರಾಂತ ರಂಗ ರಂಡ 'ಪ್ರತಿಮಾ ಸಭಾ'ದ ಉಸ್ತುವಾರಿ. ಆ ಮೂಲಕ ದಾವಣಗೆರೆ ನಗರದಲ್ಲಿ ಹವ್ಯಾಸಿ ರಂಗಭೂಮಿಯ ಜೀವಂತಿಕೆ. ಜೊತೆಗೆ ಸಿದ್ಧ ಪ್ರಸಿದ್ಧರ ಸಂಗೀತ ಕಚೇರಿಗಳ ಆಯೋಜನೆ.

ಒಕ್ಕಲುತನದ ಮನೆತನದಿಂದ ಬಂದ ಈಶ್ವರಪ್ಪನವರಿಗೆ ಕೃಷಿ ಮತ್ತು ಜಾನಪದದಲ್ಲಿ ವಿಶೇಷ ಆಸಕ್ತಿ. ಸಮೃದ್ಧ ಗ್ರಾಮೀಣ ಬದುಕಿನ ಸವಿಯನ್ನು ಸವಿದವರು. ಜನಪದ ಸಂಸ್ಕೃತಿ ಕೇವಲ ಓದಿನ ಕಾರಣಕ್ಕೆ ಮಾತ್ರವಲ್ಲ; ಅನುಭವದ ಮೂಸೆಯಿಂದ ಬಂದಂತಹದ್ದು. ಒಂದು ರೀತಿಯಲ್ಲಿ ಕೃಷಿಯ ಆಚರಣೆಗಳು ಮತ್ತು ಜನಪದರ ನಂಬಿಕೆಗಳು ಸಹ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಹಾಗಾಗಿ 'ಜಾನಪದ ವ್ಯವಸಾಯ' ಎಂಬ ಮಹಾಪ್ರಬಂಧ ಕೇವಲ ಪದವಿಗಾಗಿ ರಚಿಸಿದ್ದಾಗದೇ, ಒಂದು ಕಾಲಘಟ್ಟದ ಕೃಷಿಕರ ಜೀವನ ವಿಧಾನ, ಕೃಷಿಯಲ್ಲಿ ನಂಬಿಕೆಗಳು, ಆಚರಣೆಗಳನ್ನು ಕುರಿತು ವಿವರವಾಗಿ ತಿಳಿ ಹೇಳುವ ಸಂಕಥನ ಎಂದರೆ ತಪ್ಪಾಗಲಾರದು.

ಹೀಗೆ ಜಾನಪದ, ರಂಗಭೂಮಿ, ಸಾಹಿತ್ಯ, ಶಿಕ್ಷಣ ಕ್ಷೇತ್ರಗಳಲ್ಲಿ ಅಪಾರ ಅನುಭವ, ಪಾಂಡಿತ್ಯದಿಂದಾಗಿ ಹತ್ತಾರು ಮಹತ್ವದ ಸಾಹಿತ್ಯ ಕೃತಿಗಳ ಪ್ರಕಟಣೆ. ಜೊತೆಗೆ ಸಂಪಾದಕರಾಗಿ ಹಲವು ಮಹತ್ವದ ಕೃತಿಗಳು ಬೆಳಕು ಕಂಡಿವೆ. ಇವರ ಪ್ರತಿಭಾ ಸಂಪನ್ನತೆಗೆ ಸಂದ ಪ್ರಶಸ್ತಿ – ಪುರಸ್ಕಾರಗಳು ಸಹ ಗಣನೀಯವಾಗಿವೆ.

**-ನಾಗರಾಜ ಸಿರಿಗೆರೆ**, ಕನ್ನಡ ಅಧ್ಯಾಪಕ, ದಾವಣಗೆರೆ.

## ಅಣ್ಣಾಮಲೈ ಚಿತ್ರ ಹಾಕಿದ ಕುರಿ ಕತ್ತರಿಸಿ ವಿಕೃತಿ



ಚೆನ್ನೈ, ಜೂ. 6 – ತಮಿಳುನಾಡು ಬಿಜೆಪಿ ಅಧ್ಯಕ್ಷ ಕೆ. ಅಣ್ಣಾಮಲೈ ಅವರ ಚಿತ್ರವನ್ನು ಕುರಿಯೊಂದಕ್ಕೆ ಹಾಕಿ ಅದರ ಕುತ್ತಿಗೆಯನ್ನು ಕತ್ತರಿಸಿದ ವಿಡಿಯೋ ಒಂದು ವೈರಲ್ ಆಗಿದೆ. ಈ ವಿಡಿಯೋ ಎಲ್ಲಿ ಚಿತ್ರಿಸಲಾಗಿದೆ ಎಂಬುದು ಸ್ಪಷ್ಟವಾಗಿಲ್ಲ.

ತಮಿಳುನಾಡು ಬಿಜೆಪಿ ಘಟಕ ಈ ಕೃತ್ಯವನ್ನು ತೀವ್ರವಾಗಿ ಖಂಡಿಸಿದ್ದು, ಕ್ರಮ ತೆಗೆದುಕೊಳ್ಳುವಂತೆ ಆಗ್ರಹಿಸಿದೆ.

ಈ ವಿಡಿಯೋ ಅನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿರುವ ತಮಿಳುನಾಡು ಬಿಜೆಪಿ ಉಪಾಧ್ಯಕ್ಷ ಹಾಗೂ ವಕ್ತಾರ ನಾರಾಯಣನ್ ತಿರುಪತಿ, ಅಣ್ಣಾಮಲೈ ಸೋತಿರುವುದನ್ನು ಈ ರೀತಿ ಸಂಭ್ರಮಿಸಲಾಗುತ್ತಿದೆ. ಇದು ತಮಿಳುನಾಡಿನಲ್ಲಿ ಬಿಜೆಪಿ ಬೆಳೆಯುತ್ತಿರುವುದರಿಂದ ಪ್ರತಿಪಕ್ಷಗಳು ಹೆದರಿವೆ ಎಂಬುದನ್ನು ತೋರಿಸುತ್ತದೆ. ಆ ಪಕ್ಷಗಳ ರಾಜಕೀಯ ರಸಾತಳವನ್ನು ಬಯಲು ಮಾಡುತ್ತದೆ ಎಂದು ಹೇಳಿದ್ದಾರೆ.

ಈ ವಿಡಿಯೋದಲ್ಲಿ ಚಿಕ್ಕ ಮಕ್ಕಳಿಂದ ಅಣ್ಣಾಮಲೈ ವಿರುದ್ಧ ಘೋಷಣೆ ಕೂಗಿಸುತ್ತಿರುವುದೂ ಕಂಡು ಬಂದಿದೆ. ಇದು ಪ್ರತಿಪಕ್ಷಗಳ ಕೊಳಕು ಮನಸ್ಥಿತಿ ತೋರಿಸುತ್ತಿದೆ. ಇವರು ಮಕ್ಕಳಲ್ಲಿ ದ್ವೇಷ ಹಾಗೂ ಆಕ್ರೋಶಕ್ಕೆ ಕುಮ್ಮಕ್ಕು ನೀಡುತ್ತಿದ್ದಾರೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದೂ ಆಗ್ರಹಿಸಿದ್ದಾರೆ.

ಈ ಬಗ್ಗೆ ಕೊಯಂಬತ್ತೂರಿನಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅಣ್ಣಾಮಲೈ, ಡಿ.ಎಂ.ಕೆ. ಕಾರ್ಯಕರ್ತರಿಗೆ ನನ್ನ ಮೇಲೆ ಅಷ್ಟು ಕೋಪವಿದ್ದರೆ, ನಾನು ಕೊಯಂಬತ್ತೂರಿನಲ್ಲೇ ಇರುತ್ತೇನೆ. ಅಮಾಯಕ ಕುರಿಗೆ ಹಾನಿ ಮಾಡುವುದು ಬೇಡ ಎಂದಿದ್ದಾರೆ. ಲೋಕ ಸಭಾ ಚುನಾವಣೆಯಲ್ಲಿ ಡಿ.ಎಂ.ಕೆ. ನೇತೃತ್ವದ ಬಣ ತಮಿಳುನಾಡಿನ ಎಲ್ಲಾ 39 ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ. ಬಿಜೆಪಿ ರಾಜ್ಯದಲ್ಲಿ ಯಾವುದೇ ಸ್ಥಾನ ಗೆದ್ದಿಲ್ಲವಾದರೂ, ಶೇ.11.24ರಷ್ಟು ಮತ ಪಡೆದಿತ್ತು. ಕಳೆದ ಚುನಾವಣೆಯಲ್ಲಿ ಬಿಜೆಪಿ ಶೇ.3.66ರಷ್ಟು ಮತ ಪಡೆದಿತ್ತು.

## ವಿದ್ಯಾರ್ಥಿನಿಯರ ವಸತಿ ನಿಲಯಕ್ಕೆ ಅರ್ಜಿ

ದಾವಣಗೆರೆ, ಜೂ. 6 - ಬಸವ ಬಳಗದ ವತಿಯಿಂದ ವಿದ್ಯಾರ್ಥಿ ನಿಲಯದಲ್ಲಿ ಪಿ.ಯು.ಸಿ., ಡಿಗ್ರಿ,ಇಂಜಿನಿಯರಿಂಗ್ ಮತ್ತು ಬಿ.ಎಸ್.ಸಿ. ಬಿಎಡ್ ಹಾಗೂ ನರ್ಸಿಂಗ್ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ 2024-25ನೇ ಸಾಲಿಗೆ ಪ್ರವೇಶ ಪ್ರಾರಂಭವಾಗಿದೆ. ವಿವರಕ್ಕೆ ಸಂಪರ್ಕಿಸಿ: 99720 84938, 90084 09498.

## ಸಾರ್ವಜನಿಕ ಪ್ರಕಟಣೆ

ವಿಷಯ : ಬಿಟ್ಟು ಹೋಗಿರುವ ಡೋರ್ ನಂಬರ್ 663/ಸಿ-11ನ್ನು ಮುಂದುವರೆಸುವ ಬಗ್ಗೆ.

ಈ ಮೂಲಕ ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಗೊಳಪಟ್ಟ ಈ ಕೆಳಗೆ ನಮೂದಿಸಿದ ಡೋರ್ ನಂ. 663/ಸಿ-11, ವಾರ್ಡ್ ನಂ.36ರಲ್ಲಿ **ಲೆನಿನ್ ನಗರ,** ನಿಟ್ಟುವಳ್ಳಿ ಪ್ರದೇಶದಲ್ಲಿ ಇದ್ದು, ದಿನಾಂಕ 11.10.2023 ರಂದು ಅರ್ಜಿ ನೀಡಿ ಕಛೇರಿ ದಾಖಲೆಗಳಲ್ಲಿ ಖಾತೆ ಬಿಟ್ಟು ಹೋಗಿರುವ ಪ್ರಯುಕ್ತ ಕ್ರಯಪತ್ರ, ಇಸಿ ಹಾಗೂ ಇತರೆ ದಾಖಲೆಗಳನ್ನು ಲಗತ್ತಿಸಿರುತ್ತಾರೆ. ಸದರಿ ಡೋರ್ ನಂ.ನ ಖಾತೆಯನ್ನು ಕಛೇರಿ ವಹಿಗಳಲ್ಲಿ ನಮೂದಿಸಿಕೊಳ್ಳಲು ಶ್ರೀ ರುದ್ರಮುನಿ ಬಿನ್ ಬೋಸಯ್ಯ ಅವರು ಕೋರಿರುತ್ತಾರೆ.

ಸದರಿಯವರು ಸಲ್ಲಿಸಿರುವ ದಾಖಲೆಗಳ ಆಧಾರದ ಮೇಲೆ ಈ ಪ್ರಕಟಣೆ ಹೊರಡಿಸಲಾಗಿದ್ದು, ಸದರಿ ಡೋರ್ ನಂಬರ್ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ಏನಾದರೂ ತಕರಾರು / ಆಕ್ಷೇಪಣೆಗಳು ಇದ್ದಲ್ಲಿ ತಕರಾರು ರುಜುವಾತು ಪಡಿಸುವಂತಹ ಮೂಲ ದಾಖಲಾತಿಗಳನ್ನು ಒಂದು ವಾರದೊಳಗಾಗಿ ಈ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಬಾರದಿದ್ದಲ್ಲಿ, ಈ ಮೇಲೆ ತಿಳಿಸಿರುವ ಸ್ವತ್ತಿನ ಬಗ್ಗೆ ಯಾವುದೇ ಆಕ್ಷೇಪಣೆ ಇರುವುದಿಲ್ಲ ಎಂದು ಭಾವಿಸಿ ಆಸ್ತಿ ತೆರಿಗೆ ಪಾವತಿ ಹೊಣೆಗಾರಿಕೆಯನ್ನು ಅರ್ಜಿದಾರರಾದ ಶ್ರೀ ರುದ್ರಮುನಿ ಬಿನ್ ಬೋಸಯ್ಯ ಅವರ ಹೆಸರಿಗೆ ಕೆಎಂಎಫ್-24ರ ವಹಿಯಲ್ಲಿ ಮುಂದುವರೆಸಲಾಗುವುದು ತಿಳಿಯಿರಿ.

ವಲಯ ಆಯುಕ್ತರು
ವಲಯ ಕಛೇರಿ - 2ರ
ಮಹಾನಗರ ಪಾಲಿಕೆ, ದಾವಣಗೆರೆ.

**ಮೊ : 73377 42621**

**ಶ್ರೀ ಅಕ್ಕಮಹಾದೇವಿ ಸಮಾಜ (ರಿ.)**

## ಶ್ರೀ ಅಕ್ಕಮಹಾದೇವಿ ಸಹಾಯ ನಿಧಿ

**ಶ್ರೀ ಅಕ್ಕಮಹಾದೇವಿ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2.**

## ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಶ್ರೀ ಅಕ್ಕಮಹಾದೇವಿ ಸಮಾಜದ ಶ್ರೀ ಅಕ್ಕಮಹಾದೇವಿ ಸಹಾಯ ನಿಧಿ ಉಪ ಸಮಿತಿ ವತಿಯಿಂದ 2023-24ನೇ ಶೈಕ್ಷಣಿಕ ವರ್ಷದಲ್ಲಿ ಅತಿ ಹೆಚ್ಚು ಅಂಕ ಪಡೆದ SSLC ಹಾಗೂ ದ್ವಿತೀಯ ವರ್ಷದ PUCಯಲ್ಲಿ ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಪಡೆಯಲು ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳು SSLC ಯಲ್ಲಿ ಶೇಕಡ 85 ರಷ್ಟು ಹಾಗೂ ದ್ವಿತೀಯ ವರ್ಷದ ಪದವಿ ಪೂರ್ವ ತರಗತಿಯಲ್ಲಿ ಶೇಕಡ 90ರಷ್ಟು ಅಂಕ ಪಡೆದವರು ಹಾಗೂ ನಗರ ಪ್ರದೇಶದ ಸರ್ಕಾರಿ ಶಾಲೆಯಲ್ಲಿ ಶೇಕಡ 85 ರಷ್ಟು SSLCಯಲ್ಲಿ, ಶೇಕಡ 90ರಷ್ಟು PUCಯಲ್ಲಿ ಅಂಕ ಪಡೆದು ಉತ್ತೀರ್ಣರಾದ ಆರ್ಥಿಕವಾಗಿ ಹಿಂದುಳಿದವರಿಗೆ 2024-25ನೇ ಶೈಕ್ಷಣಿಕ ವರ್ಷದಲ್ಲಿ ನಗದು ಪ್ರತಿಭಾ ಪುರಸ್ಕಾರ ಹಾಗೂ ಪ್ರಮಾಣ ಪತ್ರ ಕೊಟ್ಟು ಪುರಸ್ಕರಿಸಲಾಗುವುದು. ಕಡು ಬಡವರಿಗೆ, ಅನಾಥ ವಿದ್ಯಾರ್ಥಿಗಳಿಗೆ ಆದ್ಯತೆ ಕೊಡಲಾಗುವುದು. ಆಸಕ್ತ ವಿದ್ಯಾರ್ಥಿಗಳು ಸದರಿ ಸಂಸ್ಥೆಯ ಕಛೇರಿಯಲ್ಲಿ ನಿಗದಿಪಡಿಸಲಾದ ಅರ್ಜಿ ಪಡೆದು, ಅಂಕಪಟ್ಟಿಯೊಂದಿಗೆ ಶಾಲಾ-ಕಾಲೇಜುಗಳ ಮುಖ್ಯಸ್ಥರ ದೃಢೀಕರಣದೊಂದಿಗೆ ದಿನಾಂಕ : 15.06.2024 ರಂದು ಸಾಯಂಕಾಲ 5.00 ಘಂಟೆಯೊಳಗೆ ಅರ್ಜಿ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. ವಿದ್ಯಾರ್ಥಿಗಳ ಆಯ್ಕೆ ಉಪ ಸಮಿತಿಯ ತೀರ್ಮಾನವೇ ಅಂತಿಮವಾದದ್ದು.

| | | |
|---|---|---|
| ಸಹಿ/- | ಸಹಿ/- | ಸಹಿ/- |
| ಕೆ.ಕೆ. ಸುಶೀಲಮ್ಮ | ಎನ್. ಜಯಮ್ಮ | ಡಿ. ಸುವರ್ಣಮ್ಮ |
| ಅಧ್ಯಕ್ಷರು | ಉಪಾಧ್ಯಕ್ಷರು | ಕಾರ್ಯದರ್ಶಿಗಳು |
| ಸಹಿ/- | ಸಹಿ/- | ಸಹಿ/- |
| ಶಾಂತಾ ಯಾದಗಲ್ | ಸುಮ ಶಿವಯೋಗಿ | ಶೋಭಾ ಕಣವಿ |
| ಉಪಸಮಿತಿ ಅಧ್ಯಕ್ಷರು | ಉಪಸಮಿತಿ ಕಾರ್ಯದರ್ಶಿ | ಕೋಶಾಧ್ಯಕ್ಷೆ, ಉಪಸಮಿತಿ |


**ಮನೆಗಳು ಮಾರಾಟಕ್ಕಿವೆ**
ಸಣ್ಣ ಸಣ್ಣ ಮನೆಗಳು ಮಾರಾಟಕ್ಕಿವೆ. ಸರಸ್ವತಿ ಬಡಾವಣೆಯ ಡಾಬಾ ಸ್ಟಾಪ್ ಹತ್ತಿರ 20x30 ದಕ್ಷಿಣ ಮೇಲೆ - ಕೆಳಗೆ, ಆಂಜನೇಯ ಬಡಾವಣೆಯಲ್ಲಿ 15x40 ದಕ್ಷಿಣ, ತರಳಬಾಳು ಬಡಾವಣೆಯಲ್ಲಿ 30x35 ದಕ್ಷಿಣ 3 ಫ್ಲೋರ್.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**FLAT FOR SALE**
ದಾವಣಗೆರೆ ವಿದ್ಯಾನಗರ ಕೊನೆ ಬಸ್ ಸ್ಟಾಪ್ ಬಳಿ
3BHK Semi furnished ಫ್ಲಾಟ್ ಮಾರಾಟಕ್ಕಿದೆ.
ಸಂಪರ್ಕಿಸಿ: 88614 11687

**ಬೇಕಾಗಿದ್ದಾರೆ**
ಪತ್ರಿಕಾ ಕಚೇರಿಯಲ್ಲಿ ಸಂಜೆ ಪಾಳೆಯದಲ್ಲಿ ಕೆಲಸ ಮಾಡಲು ಕನ್ನಡ ಭಾಷಾ ಜ್ಞಾನ, ಕನ್ನಡ ಟೈಪಿಂಗ್ ಬಲ್ಲ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ : ಮಧ್ಯಾಹ್ನ 12ರ ನಂತರ
ಫೋ. : 08192 254736

**Property Hub**
• EC
• E-swathu
• Building Licence
• Khatha Change
96118 66449

**ಅಡುಗೆ : ಮಹಿಳೆ ಬೇಕು**
ಪ್ರತಿದಿನ ಬೆಳಿಗ್ಗೆ 8.30ರಿಂದ ಸಂಜೆ 5.30ರವರೆಗೆ ಮನೆಯಲ್ಲಿ ಸಸ್ಯಹಾರಿ ಅಡುಗೆ ಮತ್ತು ಇತರೆ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ. ಸಂಪರ್ಕಿಸಿ :
98442-94446

**ಸೈಟುಗಳು ಮಾರಾಟಕ್ಕಿದೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ 30x40 ಪೂರ್ವ, 30x40 ದಕ್ಷಿಣ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ, ಡಾಲರ್ಸ್ ಕಾಲೋನಿ, ಶಿವಪಾರ್ವತಿ ಗ್ಲಾಸ್ ಹೌಸ್ ಲೇಔಟ್, ಗೀತಂ ಕಾಲೇಜ್ ಹತ್ತಿರ, ಜೆ.ಹೆಚ್. ಪಟೇಲ್ ಬಡಾವಣೆ, ಹೈಟೆಕ್ ಹಿಂಭಾಗ, ಎರಗುಂಟೆ ಇನ್ವೆಸ್ಟ್ ಸೈಟ್ಸ್, ಉತ್ತಮ ದರದಲ್ಲಿ ದೊರೆಯುತ್ತವೆ. 30x40, 40x50, 40x60, 30x50 ಎಲ್ಲಾ ಅಳತೆಯ ಸೈಟ್‌ಗಳಿವೆ.
97315 12365

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಗೋಡೌನ್ ಬಾಡಿಗೆಗೆ ಇದೆ**
5000 Sq,ft. 40 HP
ಕರೆಂಟ್ ಬಂಬೂ ಬಜಾರ್ ರೋಡ್, ಹೆಚ್.ಪಿ. ಪೆಟ್ರೋಲ್ ಬಂಕ್ ಹತ್ತಿರ.
81477 53622

**ಶಾಲಾ ವಾಹನ ಚಾಲಕರು ಬೇಕಾಗಿದ್ದಾರೆ**
Heavy Badge Licence ಹೊಂದಿರುವ ಅನುಭವಿ ಚಾಲಕರು ಬೇಕಾಗಿದ್ದಾರೆ.
95356 10817

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್ ಬೇಕಾಗಿದ್ದಾರೆ. ವಸತಿ ಸೌಲಭ್ಯವಿರುತ್ತದೆ.
ಸಂಪರ್ಕಿಸಿ : ಸಿ.ಜಿ.ಆಸ್ಪತ್ರೆ ಹಿಂಭಾಗ, ದಾವಣಗೆರೆ.
98450-35710, 77607-39990

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಬೇಕಾಗಿದ್ದಾರೆ**
ಸೇಲ್ಸ್ / ಮಾರ್ಕೆಟಿಂಗ್ - 04
ಡಿಲೆವರಿ ಬಾಯ್ಸ್ - 03
ಅನುಭವವುಳ್ಳವರಿಗೆ ಆದ್ಯತೆ. ಸಂಪರ್ಕಿಸಿ :
ವಿಶ್ವಾಸ್ ಸೈಂಟಿಫಿಕ್ ಕಂ.
ಹದಡಿ ರಸ್ತೆ, ದಾವಣಗೆರೆ.
ಮೊ : 99000 96349

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಎಗ್ ಸೆಂಟರ್
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ.
96860 22969

**ಮನೆ ಬಾಡಿಗೆಗೆ ಇದೆ**
ಹೊಂಡದ ಸರ್ಕಲ್‌ನ ಖಂಡಪ್ಪನ ಗಲ್ಲಿಯಲ್ಲಿ 13x45 ಅಳತೆಯ ಒಂದನೇ ಮಹಡಿ ಮನೆ ಸೋಲಾರ್, ನೀರು ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ.
94480 47506

**IMMEDIATELY WANTED TEACHERS**
B.Sc B.Ed : 03 PCM / CBZ
Interested candidates can Immediately apply to :
1.Vinayaka Convent Ganeshpet. Kalikadevi road dvg.
2.Vinayaka Public School Kondajji road, Near HP-Gas godown
Dvg. 95356 10817
Note: we will be given attractive salary to right candidates.

**ಹುಡುಗರು ಬೇಕಾಗಿದ್ದಾರೆ**
ಶ್ರೀ ಮಂಜುನಾಥ ಟ್ರ್ಯಾಕ್ಟರ್ಸ್
ಸೋನಾಲಿಕಾ ಟ್ರ್ಯಾಕ್ಟರ್ ಬಿಡಿ ಭಾಗಗಳ ಅಧಿಕೃತ ಮಾರಾಟಗಾರರು
ಇವರಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ದಾವಣಗೆರೆ.
99729 74626

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**JCB ಆಪರೇಟರ್ (ಡ್ರೈವರ್) ಬೇಕಾಗಿದ್ದಾರೆ**
99024 76675
99806 29965

**ಶಿಕ್ಷಕಿಯರು ಬೇಕಾಗಿದ್ದಾರೆ**
(ಕಾಡಜ್ಜಿ)
Play Group, LKG
1 to 7th class
Quali : PUC, NTC, D.Ed, PE Master (Male)
99729 35569

**ಕಮರ್ಷಿಯಲ್ ಜಾಗ ಬಾಡಿಗೆಗೆ**
ಕಾರ್ ಸೇಲ್/ಸರ್ವಿಸ್, ಫಾರ್ಮಾ, ಕೆಫೆ, ಗ್ರಾನೈಟ್, ಗೋಡೌನ್, ಹಾರ್ಡ್‌ವೇರ್, ಷೋರೂಮ್, ಪ್ಲೇ ಅರೇನಾ, ಅನೇಕ ಉಪಯೋಗಕ್ಕೆ ಪಿ.ಜೆ. ಬಡಾವಣೆ, ಸ್ಟೇಡಿಯಂ ರಸ್ತೆಯಲ್ಲಿ ಪೂರ್ವ ಮುಖ 3500 ಅಡಿ ಖಾಲಿ ಜಾಗ ಬಾಡಿಗೆಗೆ ಇದೆ.
95136 99252
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

**WANTED LADY TEACHERS**
B.Sc, B.Ed - 2
B.Sc - 2
Spoken English - 1
SRP CONVENT
Anjaneya Badavane, 17th Cross, Davanagere.
91645 05229, 91136 31266

**WANTED**
female computer Operator tally, Data Entry & Cash handling with good English writing @ whole sale textile Distributer near clock Tower.
Send Resume & ID by
27 VIjayalaxmi Road, Dvg-577001
Wts No. 94835 00523

ಶ್ರೀ ಗುರು ಬಕ್ಕೇಶ್ವರ ಚಿಟ್ಸ್ ಫಂಡ್ (ರಿ.)
**ಹೊಸ ಚೀಟಿಯು ಪ್ರಾರಂಭ**
ಒಂದು ಲಕ್ಷದ ಚೀಟಿ
20 ಸದಸ್ಯರು, 20 ತಿಂಗಳು, ರೂ. 3,500/- ರೂಪಾಯಿಯಿಂದ 5,000/-ರೂ.ವರೆಗೆ
ಎರಡು ಲಕ್ಷದ ಚೀಟಿ
20 ಸದಸ್ಯರು, 20 ತಿಂಗಳು, ರೂ. 7,000/- ರೂಪಾಯಿಯಿಂದ 10,000/-ರೂ.ವರೆಗೆ
5 ಲಕ್ಷದ ಚೀಟಿ
20 ಸದಸ್ಯರು, 20 ತಿಂಗಳು, ರೂ. 17,500/- ರೂಯಿಂದ 25,000/- ರೂ.ಗಳು ಮಾತ್ರ.
97383 65782, 74834 97996

**NEET, K-CET Long Term**
ಬ್ಯಾಚ್‌ಗಳು ಪ್ರಾರಂಭ
ಸಮೃದ್ಧಿ ಅಕಾಡೆಮಿ
96202 62361

**TUITIONS**
IGCSE, ICSE, CBSE and State Board from Class 5th to 12th MCC `A' Block
98444 92888

**ಸೈಟುಗಳು ಮಾರಾಟಕ್ಕಿವೆ**
ಅಮರಾವತಿ ಹೌಸಿಂಗ್ ಕಾಲೋನಿ ಮತ್ತು ಕೆಹೆಚ್‌ಬಿ ಪಕ್ಕದ 30X40 ಅಳತೆಯ 6 ಸೈಟುಗಳು ದೂಡಾ ಅನುಮೋದನೆ, ನಗರಸಭಾ ಡೋರ್ ನಂಬರ್, ಬ್ಯಾಂಕ್ ಸಾಲ ಸೌಲಭ್ಯವಿರುವ ಸೈಟುಗಳು ನೇರ ಮಾರಾಟಕ್ಕಿವೆ.
98809 33630

**TO - LET**
Furnished Flat for Sale and lease
2 BHK, Sqft : 1325
3 BHK, Sqft : 1888
Vidyanagar Last City Bus Stop
AM Apartment, Nainika Prime Rose
81519 38228

**ಬೇಕಾಗಿದ್ದಾರೆ**
ಕ್ರೆಡಿಟ್ ಕೋ-ಆಪ್ ಸೊಸೈಟಿಯಲ್ಲಿ ಸಹಾಯಕ ಹುದ್ದೆಗೆ ಕೆಲಸಕ್ಕೆ ಬೇಕಾಗಿದ್ದಾರೆ. ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. ವಿದ್ಯಾರ್ಹತೆ : ಬಿ.ಕಾಂ. ಅಥವಾ ತತ್ಸಮಾನ ಪದವಿ ಪಡೆದಿರಬೇಕು.
95908 07050

**WANTED**
Tally Experienced lady Accountant / Receptionist wanted with good salary. ITI / Diploma electrical candidates & 10th / PUC office boy wanted
98867 09334, 99646 40494

**ಕೆಲಸಕ್ಕೆ ಬೇಕಾಗಿದ್ದಾರೆ**
ಸೇಲ್ಸ್ ಗರ್ಲ್ ಕಂ ರಿಸೆಪ್ಷನಿಸ್ಟ್ (ಮಹಿಳೆ)-2
ವಿದ್ಯಾರ್ಹತೆ : ಪಿಯುಸಿ ಟೈಲರಿಂಗ್ ಅನುಭವವುಳ್ಳವರಿಗೆ ಆದ್ಯತೆ
ಟೆಕ್ನಿಕಲ್ ಅಸಿಸ್ಟೆಂಟ್ (ಪುರುಷ)-1
ವಿದ್ಯಾರ್ಹತೆ : ಪಿಯುಸಿ, ದ್ವಿಚಕ್ರ ವಾಹನವುಳ್ಳವರಿಗೆ ಆದ್ಯತೆ.
ಮಾಸಿಕ ವೇತನ : 8000-10000/-
95915 01592

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡಿಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**WANTED ADVISOR**
SBI Life Insurance
• No Investment • No Boss!!
• Flexible Work Timing
• Unlimited Income
Education : SSLC & Above
Age : 25 to 70 Years
97436 34040

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್‌ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ.
ಭೇಟಿ ಸಮಯ : ಸಂಜೆ 6.30 ರ ನಂತರ
ಶ್ರೀ ಗುರು ಎಂಟರ್‌ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ. ಜೆ. ಬಡಾವಣೆ ದಾವಣಗೆರೆ.

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಬೇಕಾಗಿದ್ದಾರೆ**
ಮಾರ್ಕೆಟಿಂಗ್‌ನಲ್ಲಿ ಅನುಭವ ಹೊಂದಿರುವ ಪುರುಷ / ಮಹಿಳಾ ಅಭ್ಯರ್ಥಿ ಕೆಲಸಕ್ಕೆ ಬೇಕಾಗಿದ್ದಾರೆ
93803 89236

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

# ಶ್ರದ್ಧಾ - ಭಕ್ತಿಯಿಂದ ಶನೇಶ್ವರ ಜಯಂತಿ ಆಚರಣೆ

## ಶನೇಶ್ವರನಿಗೆ ವಿಶೇಷ ಪೂಜೆ, ಅಭಿಷೇಕ, ತೊಟ್ಟಿಲೋತ್ಸವ, ರಥೋತ್ಸವ, ಅನ್ನ ಸಂತರ್ಪಣೆ



ಕೆಟಿಜೆ ನಗರ 10ನೇ ಕ್ರಾಸ್‌ನಲ್ಲಿರುವ ಶ್ರೀ ಶನೇಶ್ವರ ದೇವಸ್ಥಾನದಲ್ಲಿ ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್ ಪೂಜೆ ಸಲ್ಲಿಸಿ, ನಂತರ ರಥೋತ್ಸವಕ್ಕೆ ಚಾಲನೆ ನೀಡಿದರು.

ದಾವಣಗೆರೆ, ಜೂ.6- ನಗರದ ಶನೇಶ್ವರ ದೇವಾಲಯಗಳಲ್ಲಿ ಗುರುವಾರ ಶನೇಶ್ವರ ಸ್ವಾಮಿಯ ಜಯಂತ್ಯುತ್ಸವವನ್ನು ಶ್ರದ್ಧಾ - ಭಕ್ತಿ ಹಾಗೂ ವಿಜೃಂಭಣೆಯಿಂದ ನೆರವೇರಿಸಲಾಯಿತು.

ಶನೇಶ್ವರ ದೇವಾಲಯಗಳಲ್ಲಿ ವಿಶೇಷ ಪೂಜೆ, ನಾನಾ ಅಭಿಷೇಕ, ತೊಟ್ಟಿಲೋತ್ಸವ, ರಥೋತ್ಸವ, ಅನ್ನ ಸಂತರ್ಪಣೆ ಕಾರ್ಯಕ್ರಮಗಳು ನಡೆದವು. ಹನುಮಾನ್ ಮಂದಿರಗಳಲ್ಲೂ ವಿಶೇಷ ಪೂಜೆಗಳು ನಡೆದವು.

ಎಸ್‌ಓಜಿ ಕಾಲೋನಿಯಲ್ಲಿರುವ ಕರ್ಮಫಲದಾತ ಶ್ರೀ ಶನೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಬೆಳಿಗ್ಗೆಯೇ ಪಂಚಾಮೃತ ಅಭಿಷೇಕ, ತೈಲಾಭಿಷೇಕ, ಪುಷ್ಪಾಲಂಕಾರ ನಡೆಯಿತು. ನಂತರ ಪುಣ್ಯ, ನಂದಿ, ಹೋಮಗಳು ನಡೆದವು.

ಪಿ.ಬಿ. ರಸ್ತೆ ಕರೂರು ಬಳಿಯ ಪಂಚ ದೇವಸ್ಥಾನಗಳ ಮಹಾಕ್ಷೇತ್ರದಲ್ಲಿ ಶ್ರೀ ಶನೇಶ್ವರ ಸ್ವಾಮಿಯ 30ನೇ ವರ್ಷದ ಜಯಂತ್ಯುತ್ಸವ ನಡೆಯಿತು. ಶ್ರೀ ಕಾಶಿ ವಿಶ್ವನಾಥಲಿಂಗ ಹಾಗೂ ಶ್ರೀ ಶನೇಶ್ವರ ಸ್ವಾಮಿಗೆ ತೈಲಾಭಿಷೇಕ, ಅಭಿಷೇಕಗಳು ನಡೆದವು. ನಂತರ ತೊಟ್ಟಿಲು ಪೂಜೆ, ಶನೇಶ್ವರ ಸಹಿತ ನವಗ್ರಹ ಶಾಂತಿ ಹೋಮ, ಪ್ರಸಾದ ವಿನಿಯೋಗ ಏರ್ಪಡಿಸಲಾಗಿತ್ತು. ಸಂಜೆ ಪಲ್ಲಕ್ಕಿ ಉತ್ಸವ ನಡೆಯಿತು.

ಕೆ.ಟಿ. ಜಂಬಣ್ಣ ನಗರದ ಎರಡನೇ ಕ್ರಾಸ್‌ನಲ್ಲಿರುವ ಶ್ರೀ ಶನೇಶ್ವರ ದೇವಸ್ಥಾನದಲ್ಲಿ ಜಯಂತ್ಯುತ್ಸವ ನೆರವೇರಿತು. ಬೆಳಗ್ಗೆ 6 ರಿಂದಲೇ ತೈಲಾಭಿಷೇಕ, ಪಂಚಾಮೃತ ಅಭಿಷೇಕ, ರುದ್ರಾಭಿಷೇಕ ನಂತರ ತೊಟ್ಟಿಲೋ ತ್ಸವ ನಡೆಯಿತು.

ಕೆಟಿಜೆ ನಗರದ 10ನೇ ಕ್ರಾಸ್‌ನಲ್ಲಿರುವ ಶ್ರೀ ಶನೈಶ್ಚರ ಸ್ವಾಮಿ ದೇವಾಲಯ ಟ್ರಸ್ಟ್ ವತಿಯಿಂದ ವಿದ್ಯಾಗಣಪತಿ, ಅಭಯಹಸ್ತ ಆಂಜನೇಯ, ಜಗದಾಂಬ, ನವಗ್ರಹ ಸಹಿತ ಶನೈಶ್ಚರ ದೇವಾಲಯದಲ್ಲಿ ಶನೈಶ್ಚರ ಜಯಂತಿ ಹಾಗೂ ರಥೋತ್ಸವ ನಡೆಯಿತು.

ಹದಡಿ ರಸ್ತೆಯ ಕೊಪ್ಪದಾಂಬ ಸೇವಾ ಟ್ರಸ್ಟ್‌ನ ಶ್ರೀ ಕ್ಷೇತ್ರ ನವಸ್ಥಾನದಲ್ಲೂ ವಿಶೇಷ ಪೂಜೆಗಳು ಜರುಗಿದವು. ಬೆಳಗ್ಗೆ ಪಂಚಾಮೃತ ಅಭಿಷೇಕ, ತೈಲಾಭಿಷೇಕ, ಅಲಂಕಾರ ಸೇವೆ, ನಂತರ ತೊಟ್ಟಿಲೋತ್ಸವ ನಡೆಯಿತು.

ಜಿಲ್ಲಾಧಿಕಾರಿ ಡಾ.ಎಂ.ವಿ.ವೆಂಕಟೇಶ್ ರಥೋತ್ಸವಕ್ಕೆ ಚಾಲನೆ ನೀಡಿದರು. ಕುಂಭ ಹೊತ್ತ ಮಹಿಳೆಯರ ಮೆರವಣಿಗೆ ರಥೋತ್ಸವಕ್ಕೆ ಮೆರಗು ನೀಡಿತು. ನಂತರ ಅನ್ನ ಸಂತರ್ಪಣೆ ನಡೆಯಿತು.

ಶ್ರೀ ಶನೈಶ್ಚರ ಸ್ವಾಮಿ ದೇವಸ್ಥಾನ ಟ್ರಸ್ಟಿನ ಅಧ್ಯಕ್ಷ ಬಿ.ಎನ್.ಮಲ್ಲೇಶ್, ಸಹ ಕಾರ್ಯದರ್ಶಿ ಡಿ.ಎನ್. ಜಗದೀಶ್, ಕಾರ್ಯದರ್ಶಿ ಎ.ವೈ.ಕೃಷ್ಣಮೂರ್ತಿ, ಖಜಾಂಚಿ ನಂಜುಂಡಪ್ಪ, ನಿರ್ದೇಶಕರಾದ ಅಶೋಕ್, ರಾಜಣ್ಣ, ಎನ್.ಶ್ರೀನಿವಾಸ್, ಐರಣಿ ತಿಮ್ಮಯ್ಯ, ತಿಮ್ಮಪ್ಪ ಹುಲಿಕೆರೆ, ಇಎಸ್‌ಐ ಶ್ರೀನಿವಾಸ್, ಷಣ್ಮುಖಪ್ಪ, ಮೀನಾಕ್ಷಮ್ಮ, ಚೌಧರಿ ರಂಗಪ್ಪ ಇತರರು ಇದ್ದರು.

# ಕಳಪೆ ಆಹಾರ ಪದಾರ್ಥ : ಶಾಸಕ ಕೆಂಡಮಂಡಲ

## ಕೊಗ್ಗನೂರಿನ ಅಂಗನವಾಡಿ ಕೇಂದ್ರಕ್ಕೆ ಶಾಸಕ ಬಸವಂತಪ್ಪ ಭೇಟಿ - ಪರಿಶೀಲನೆ



ದಾವಣಗೆರೆ, ಜೂ. 6 - ಕಳಪೆ ಗುಣಮಟ್ಟದ ಆಹಾರ ಪದಾರ್ಥಗಳಿಂದ ಅಡುಗೆ ಮಾಡಿ ಮಕ್ಕಳಿಗೆ ಬಡಿಸಿದರೆ ಮಕ್ಕಳ ಆರೋಗ್ಯದ ಸ್ಥಿತಿ ಹದಗೆಡುತ್ತದೆ ಎಂದು ಶಾಸಕ ಕೆ.ಎಸ್. ಬಸವಂತಪ್ಪ ಅಂಗನವಾಡಿ ಕಾರ್ಯಕರ್ತೆಯನ್ನು ತರಾಟೆಗೆ ತೆಗೆದುಕೊಂಡರು.

ತಾಲ್ಲೂಕಿನ ಕೊಗ್ಗನೂರು ಗ್ರಾಮದ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಸಂದರ್ಭದಲ್ಲಿ ಬೂಸ್ಟ್ ಹಿಡಿದ ಬೆಲ್ಲ, ಕಳಪೆ ಸಾಂಬಾರದ ಪುಡಿ, ರವೆ ಸೇರಿದಂತೆ, ವಿತರಣೆಯಾದ ಎಲ್ಲಾ ರೀತಿಯ ಆಹಾರ ಪದಾರ್ಥಗಳು ಕಳಪೆಯಾಗಿರುವುದನ್ನು ಕಂಡು ಕೆಂಡಾಮಂಡಲರಾದರು.

ಅಂಗನವಾಡಿ ಕೇಂದ್ರದ ಮಕ್ಕಳ ಆರೋಗ್ಯದ ದೃಷ್ಟಿಯಿಂದ ಗುಣಮಟ್ಟದ ಪೌಷ್ಟಿಕ ಆಹಾರ ಪೂರೈಸಲು ಸರ್ಕಾರ ಕೋಟ್ಯಂತರ ರೂಪಾಯಿ ಖರ್ಚು ಮಾಡುತ್ತಿದೆ. ಆದರೆ ಇಲ್ಲಿ ಕಳಪೆ ಗುಣಮಟ್ಟದ ಆಹಾರ ನೀಡಿ ಮಕ್ಕಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವಂತೆ ಆಹಾರ ತಯಾರಿಸಲಾಗುತ್ತಿದೆ. ಏನಾದರೂ ಸಂಭವಿಸಿದರೆ ಯಾರು ಹೊಣೆ ಎಂದು ಅಂಗನವಾಡಿ ಕೇಂದ್ರದ ಸಿಬ್ಬಂದಿ, ಕಾರ್ಯಕರ್ತೆಯನ್ನು ಪ್ರಶ್ನಿಸಿದರು.

ಮಧ್ಯಾಹ್ನವಾದರೂ ಮಕ್ಕಳ ಹಾಜರಿ ಪುಸ್ತಕದಲ್ಲಿ ಮಕ್ಕಳ ಹಾಜರಿ ಹಾಕಿಲ್ಲ. ಕೇವಲ ಇಬ್ಬರು ಮಕ್ಕಳು ಇದ್ದಾರೆ. ಸಂಜೆ ವೇಳೆಗೆ ಅವರಿಗೆ ಇಷ್ಟ ಬಂದಷ್ಟು ಮಕ್ಕಳ ಹಾಜರಿ ಹಾಕಲಾಗುತ್ತಿದೆ. ಸ್ಟಾಕ್ ಪುಸ್ತಕ ಅಂಗನವಾಡಿ ಕೇಂದ್ರದಲ್ಲಿ ಇಟ್ಟಿಲ್ಲ, ಮನೆಯಲ್ಲಿ ಇಟ್ಟಿರುವುದಾಗಿ ಹೇಳುತ್ತಾರೆ. ರಿಮಾರ್ಕ್ ಪುಸ್ತಕದಲ್ಲಿ ಇಲ್ಲಿನ ಸಮಸ್ಯೆಗಳ ದಾಖಲು ಮಾಡಿದ್ದೇನೆ. ಸಂಬಂಧಪಟ್ಟ ಅಧಿಕಾರಿಗಳು ಭೇಟಿ ನೀಡಿ ಕ್ರಮ ತೆಗೆದುಕೊಳ್ಳಬೇಕೆಂದರು.

ಮಾಯಕೊಂಡ ಕ್ಷೇತ್ರದಲ್ಲಿರುವ ಅಂಗನವಾಡಿ ಕೇಂದ್ರಗಳಲ್ಲಿ ಇದೇ ರೀತಿಯ ಕಳಪೆ ಗುಣಮಟ್ಟದ ಆಹಾರ ಪದಾರ್ಥಗಳನ್ನು ಪೂರೈಸಲಾಗುತ್ತಿದೆ ಎಂದು ಪೋಷಕರಿಂದ ದೂರುಗಳು ಬರುತ್ತಿವೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿ ಕಳಪೆ ಗುಣಮಟ್ಟದ ಆಹಾರ ಪೂರೈಸುವ ಏಜೆನ್ಸಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಕಳಪೆ ಗುಣಮಟ್ಟದ ಆಹಾರ ಸೇವಿಸಿ ಮಕ್ಕಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿದರೆ ಅಧಿಕಾರಿಗಳನ್ನು ಹೊಣೆಯನ್ನಾಗಿಸಿ ಕಠಿಣ ಕ್ರಮ ತೆಗೆದುಕೊಳ್ಳಲಾಗಯವುದು ಎಂದು ಎಚ್ಚರಿಕೆ ನೀಡಿದರು.

ಅಲ್ಲದೇ, ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ಪೌಷ್ಟಿಕಾಂಶದಿಂದ ಕೂಡಿದ ಆಹಾರ ಸಮರ್ಪಕವಾಗಿ ನೀಡುತ್ತಿಲ್ಲ. ಇದೇ ರೀತಿ ಬಹುತೇಕ ಅಂಗನವಾಡಿ ಕೇಂದ್ರಗಳಲ್ಲಿ ಕಳಪೆ ಗುಣಮಟ್ಟದ ಆಹಾರ ಪೂರೈಸಲಾಗುತ್ತಿದೆ. ಅದಲ್ಲದೇ ಅಶುಚಿತ್ವ ಮತ್ತು ಮೂಲಸೌಕರ್ಯದ ಕೊರತೆ ಎದ್ದು ಕಾಣುತ್ತಿವೆ. ಮೇಲ್ವಿಚಾರಕರು ಹಾಗೂ ನೋಡಲ್ ಅಧಿಕಾರಿಗಳು ಇಂತಹ ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿ ಆಹಾರದ ಗುಣಮಟ್ಟ ಪರೀಕ್ಷೆ ಮಾಡುತ್ತಿಲ್ಲ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ವಾರದಲ್ಲಿ ಒಂದು ಬಾರಿ ಅಂಗನವಾಡಿ ಕೇಂದ್ರಗಳಿಗೆ ನೀಡಿ ಆಹಾರದ ಗುಣಮಟ್ಟ ಪರೀಕ್ಷೆ ಮಾಡಬೇಕೆಂದು ತಾಕೀತು ಮಾಡಿದರು.

# ಹರಿಹರ : ರಾಮಕೃಷ್ಣ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಪರಿಸರ ದಿನಾಚರಣೆ



ಹರಿಹರ, ಜೂ.6- ಗುತ್ತೂರು, ಚಿಂತಾಮಣಿ ನಗರದ ಶ್ರೀ ರಾಮಕೃಷ್ಣ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಪರಿಸರ ದಿನಾಚರಣೆಯನ್ನು ಮಕ್ಕಳು ಹಾಗೂ ಶಿಕ್ಷಕ-ಶಿಕ್ಷಕಿಯರೊಂದಿಗೆ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಶಾಲೆಯ ಮುಖ್ಯೋಪಾಧ್ಯಾಯ ಉದಯಕುಮಾರ್, ಸಹ ಶಿಕ್ಷಕ-ಶಿಕ್ಷಕಿಯರಾದ ಲೀನಾ ಶ್ಯಾಮರಾಜ್, ಹೇಮಾವತಿ, ಸೌಮ್ಯ ರಮಾ, ಆರೋಗ್ಯ ಮೇರಿ, ಸುಧಾ, ಶಿಲ್ಪ ಕಂಠಿ, ಶ್ವೇತಾ, ಅಶ್ವಿನಿ, ಶಾರದ ಕಣ್ಯಾಳ, ಕೃಷ್ಣಪ್ಪ, ಶಶಿಕಲಾ ಹಾಗೂ ಸೇವಾ ವರ್ಗದವರು ಹಾಜರಿದ್ದರು.

## ಇಂದು ದವನ್ ಕಾಲೇಜು ಸ್ಫೂರ್ತಿ ಯೂತ್ ಫೆಸ್ಟ್

ದವನ್ ಪದವಿ ಕಾಲೇಜು ವತಿಯಿಂದ ಪದವಿ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿರುವ ಸ್ಫೂರ್ತಿ ಯೂತ್ ಫೆಸ್ಟ್ ಇಂದು ಬೆಳಿಗ್ಗೆ 8.30ಕ್ಕೆ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ನಡೆಯಲಿದೆ.

ದವನ್ ಕಾಲೇಜು ಕಾರ್ಯದರ್ಶಿ ವೀರೇಶ್ ಪಟೇಲ್, ಜಂಟಿ ಕಾರ್ಯದರ್ಶಿ ಡಾ. ಜಿ.ಎಸ್. ಅಂಜು, ನಿರ್ದೇಶಕ ಹರ್ಷರಾಜ್ ಎ. ಗುಜ್ಜಾರ್, ಉಪಪ್ರಾಚಾರ್ಯರಾದ ಎನ್. ಅನಿತಾ, ಯುವಜನೋತ್ಸವ ಸ್ಪರ್ಧೆಯ ಉಸ್ತುವಾರಿಗಳಾದ ಜಿ.ಬಿ. ಚಂದನ್, ಕೆ.ಕೊಟ್ರಪ್ಪ ಹಾಗೂ ಇತರರು ಯುವ ಜನೋತ್ಸವದಲ್ಲಿ ಭಾಗವಹಿಸುವರು.

## ಇಂದು ವಿದ್ಯುತ್ ವ್ಯತ್ಯಯ

ಎಂ.ಸಿ.ಸಿ. ಬಿ. ಬ್ಲಾಕ್, ಸಿದ್ದವೀರಪ್ಪ ಬಡಾವಣೆ, ಎಸ್.ಎಸ್. ಲೇಔಟ್ ಎ ಮತ್ತು ಬಿ ಬ್ಲಾಕ್, ಎಂ.ಸಿ.ಸಿ. ಬಿ. ಬ್ಲಾಕ್, ಕುವೆಂಪು ನಗರ, ನಿಜಲಿಂಗಪ್ಪ ಬಡಾವಣೆ. ಮೌನೇಶ್ವರ ಬಡಾವಣೆ, ನಿಟ್ಟುವಳ್ಳಿ, ಲೆನಿನ್ ನಗರ, ಸರಸ್ವತಿ ನಗರ, ಶಕ್ತಿ ನಗರ, ಡಿ.ಸಿ.ಎಂ. ಟೌನ್‌ಶಿಪ್, ಕೊಟ್ಟೂರೇಶ್ವರ ಬಡಾವಣೆ, ಕೆ.ಎಸ್.ಆರ್.ಟಿ.ಸಿ., ಭಗತ್ ಸಿಂಗ್ ನಗರ, ಈರುಳ್ಳಿ ಮಾರುಕಟ್ಟೆ, ತರಕಾರಿ ಮಾರುಕಟ್ಟೆ, ಕೆ.ಟಿ.ಜೆ. ನಗರ, ಕೆ.ಬಿ. ಬಡಾವಣೆ, ಪಿ.ಜೆ. ಬಡಾವಣೆ, ಈದ್ಗಾ ಕಾಂಪ್ಲೆಕ್ಸ್, ವಿನೋಬ ನಗರ, ಎಸ್.ಎಸ್. ಬಿ ಬ್ಲಾಕ್, ಬಾಲಾಜಿ ನಗರ, ಬಸವೇಶ್ವರ ನಗರ, ರೆಹಮಾನ್ ರಸ್ತೆ, ಕೊರಚರ ಹಟ್ಟಿ, ದೇವರಾಜ್ ಕ್ವಾರ್ಟರ್ಸ್, ಇಂದಿರಾ ನಗರ, ಕಾರ್ಲ್‌ಮಾರ್ಕ್ಸ್ ನಗರ, ಸಿದ್ದರಾಮೇಶ್ವರ ಬಡಾವಣೆ, ಮಂಡಕ್ಕಿ ಬಟ್ಟಿ, ಶಿವ ಪಾರ್ವತಿ ನಗರ, ಮಂಡೀ ಪೇಟೆ, ಬಿನ್ನಿ ಕಂಪನಿ ರಸ್ತೆ, ಮಹಾವೀರ ರಸ್ತೆ, ಎನ್.ಆರ್. ರಸ್ತೆ, ಇಸ್ಲಾಂ ಪೇಟೆ, ಬೆಳ್ಳೂಡಿ ಗಲ್ಲಿ, ಬಿ.ಟಿ. ಗಲ್ಲಿ, ವಿಜಯಲಕ್ಷ್ಮಿ ರಸ್ತೆ, ಎಂ.ಜಿ. ರಸ್ತೆ, ಗೂಡ್‌ಶೆಡ್ ರಸ್ತೆ, ಆಜಾದ್‌ನಗರ, ಅಕ್ಕಾ ಮಸೀದಿ, ಹೆಗಡೆ ನಗರ, ಮಾಗನಹಳ್ಳಿ ರಸ್ತೆ, ಅಮೆಜಾನ್ ಬಾಬಜಾನ್ ದರ್ಗಾ, ಜೋಗಲ್ ಬಾಬಾ ಲೇಔಟ್. ದುರ್ಗಾಂಬಿಕಾ ಬಡಾವಣೆ, ಹೊಸ ಮತ್ತು ಹಳೆ ಚಿಕ್ಕನಹಳ್ಳಿ ಬಡಾವಣೆ, ಎಂ.ಸಿ.ಸಿ. ಬಿ ಬ್ಲಾಕ್, ದೇವರಾಜ ಅರಸು ಬಡಾವಣೆ ಎ, ಬಿ ಮತ್ತು ಸಿ ಬ್ಲಾಕ್, ಮಹಾನಗರ ಪಾಲಿಕೆ, ಎಂ.ಬಿ.ಕೆರಿ, ಚಲುವಾದಿ ಕೆರಿ, ಹೊಂಡದ ವೃತ್ತ, ಜಾಲಿ ನಗರ, ದುರ್ಗಾಂಬಿಕಾ ದೇವಸ್ಥಾನದ ಹತ್ತಿರ, ಇ.ಡಬ್ಲ್ಯೂ.ಎಸ್. ಕಾಲೋನಿ, ಗಣೇಶರಾವ್ ವೃತ್ತ. ಇ.ಎಸ್.ಐ. ಆಸ್ಪತ್ರೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ ವಿದ್ಯುತ್ ವ್ಯತ್ಯಯವುಂಟಾಗಲಿದೆ.

## ಸಂಸದೆ ಕಂಗನಾ ಮೇಲೆ ಸಿ.ಐ.ಎಸ್.ಎಫ್. ಸಿಬ್ಬಂದಿಯ ಹಲ್ಲೆ

ನವದೆಹಲಿ, ಜೂ. 6 – ನಟಿ ಹಾಗೂ ಬಿಜೆಪಿ ಸಂಸದೆ ಕಂಗನಾ ರಣಾವತ್ ಅವರ



ಮೇಲೆ ಮಹಿಳಾ ಸಿ.ಐ.ಎಸ್.ಎಫ್. ಪೇದೆ ಹಲ್ಲೆ ನಡೆಸಿ ಅವಹೇಳನ ಮಾಡಿದ ಘಟನೆ ನಡೆದಿದೆ. ಎರಡು ದಿನಗಳ ಹಿಂದಷ್ಟೇ ಅವರು ಹಿಮಾಚಲ ಪ್ರದೇಶದ ಮಂಡಿ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿದ್ದರು. ರೈತರ ಹೋರಾಟದ ಸಮಯದಲ್ಲಿ ಕಂಗನಾ ಅವರು ತೆಗೆದುಕೊಂಡ ನಿಲುವಿನ ಬಗ್ಗೆ ಪೇದೆ ಅಸಮಾಧಾನಗೊಂಡು ಹಲ್ಲೆ ನಡೆಸಿರುವುದು ವಿಡಿಯೋದಲ್ಲಿ ಕಂಡು ಬಂದಿದೆ. ಈ ಬಗ್ಗೆ ಪೇದೆ ವಿರುದ್ಧ ಎಫ್.ಐ.ಆರ್. ದಾಖಲಿಸಲಾಗಿದೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಶಾಮನೂರು, ಜರೀಕಟ್ಟೆ, ಮುದಹದಡಿ, ಜೆ.ಹೆಚ್ ಪಟೇಲ್ ಬಡಾವಣೆ, ಕೆ.ಹೆಚ್.ಬಿ. ಹೊಸ ಕುಂದವಾಡ, ಹಳೆಕುಂದವಾಡ, ರಶ್ಮಿ ಹಾಸ್ಟೆಲ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ 6 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಲೋಕಸಭೆಯಲ್ಲಿ 280 ಹೊಸ ಸಂಸದರು

ನವದೆಹಲಿ, ಜೂ. 6 - ಕಳೆದ ಲೋಕಸಭಾ ಚುನಾವಣೆಯಲ್ಲಿ ಆಯ್ಕೆಯಾದವರ ಪೈಕಿ 280 ಸಂಸದರು ಹೊಸಬರಾಗಿದ್ದಾರೆ. 2019ರಲ್ಲಿ 267 ಸಂಸದರು ಮೊದಲ ಬಾರಿಗೆ ಆಯ್ಕೆಯಾಗಿದ್ದರು.

263 ಸಂಸದರು ಮಾತ್ರ ಈ ಹಿಂದೆ ಲೋಕಸಭಾ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಅಲ್ಲದೇ, 16 ಸಂಸದರು ರಾಜ್ಯಸಭೆಯಿಂದ ಬಂದವರಾಗಿದ್ದಾರೆ. ಒಬ್ಬ ಸಂಸದ ಏಳು ಬಾರಿ ಲೋಕಸಭಾ ಸದಸ್ಯರಾಗಿದ್ದಾರೆ ಎಂದು ಪಿ.ಆರ್.ಎಸ್. ಲೆಜಿಸ್ಲೇಟಿವ್ ರೀಸರ್ಚ್ ವರದಿ ತಿಳಿಸಿದೆ.

ಪುನರಾಯ್ಕೆಯಾದ ಎಂಟು ಸಂಸದರು ತಮ್ಮ ಕ್ಷೇತ್ರವನ್ನು ಬದಲಿಸಿದ್ದಾರೆ. ಒಬ್ಬರು ಎರಡು ಕ್ಷೇತ್ರಗಳಿಂದ ಆಯ್ಕೆಯಾಗಿದ್ದಾರೆ. ಒಂಭತ್ತು ಸಂಸದರು ಪಕ್ಷಾಂತರ ಮಾಡಿದ ನಂತರ ಆಯ್ಕೆಯಾಗಿದ್ದಾರೆ. ಎಂಟು ಸಂಸದರು ಒಡಕಿಗೆ ಗುರಿಯಾದ ಪಕ್ಷದಿಂದ ಆಯ್ಕೆಯಾಗಿದ್ದಾರೆ. ಕಣಕ್ಕಿಳಿದಿದ್ದ 53 ಸಚಿವರಲ್ಲಿ, 35 ಜನರು ಪುನರಾಯ್ಕೆಯಾಗಿದ್ದಾರೆ.

ಈ ಬಾರಿ ಆಯ್ಕೆಯಾಗಿರುವ ಸಂಸದರ ಸರಾಸರಿ ವಯಸ್ಸು 56 ವರ್ಷವಾಗಿದೆ. ಕಳೆದ ಸಂಸತ್ತಿನಲ್ಲಿ ಸರಾಸರಿ ವಯಸ್ಸು 59 ಆಗಿತ್ತು ಎಂದೂ ವರದಿ ತಿಳಿಸಿದೆ.

ಶೇ.11ರಷ್ಟು ಸಂಸದರ ವಯಸ್ಸು 40ಕ್ಕಿಂತ ಕಡಿಮೆ ಇದೆ. ಶೇ.38ರಷ್ಟು ಸಂಸದರ ವಯಸ್ಸು 41ರಿಂದ 55 ಆಗಿದೆ. ಶೇ.52ರಷ್ಟು ಸಂಸದರ ವಯಸ್ಸು 55ಕ್ಕಿಂತ ಹೆಚ್ಚಾಗಿದೆ. ಅತ್ಯಂತ ಹಿರಿಯ ಸಂಸದರ ವಯಸ್ಸು 82 ವರ್ಷವಾಗಿದೆ.

ಈ ಬಾರಿ ಲೋಕಸಭೆಗೆ ಆಯ್ಕೆಯಾಗಿರುವ ಸಂಸದರು 41 ಪಕ್ಷಗಳಿಗೆ ಸೇರಿದವರಾಗಿದ್ದಾರೆ. ಕಳೆದ ಬಾರಿ 36 ಪಕ್ಷಗಳಿಂದ ಸಂಸದರು ಆಯ್ಕೆಯಾಗಿದ್ದರು. ಮಾನ್ಯತೆ ಪಡೆಯದ ಪಕ್ಷಗಳು 11 ಸೀಟುಗಳನ್ನು ಹೊಂದಿವೆ. ಏಳು ಸಂಸದರು ಸ್ವತಂತ್ರವಾಗಿ ಆಯ್ಕೆಯಾಗಿದ್ದಾರೆ.

## ಅಗ್ನಿಪಥ್ ಯೋಜನೆ ಬದಲಿಸಲು, ಜಾತಿ ಗಣತಿ ನಡೆಸಲು ಜೆಡಿಯು ಆಗ್ರಹ

ನವದೆಹಲಿ, ಜೂ. 6 – ಅಗ್ನಿಪಥ್ ಯೋಜನೆ ಬದಲಿಸಬೇಕು ಹಾಗೂ ಜಾತಿ ಗಣತಿ ನಡೆಸಬೇಕು ಎಂದು ಜೆಡಿಯು ಆಗ್ರಹಿಸಿದೆ. ಪತ್ರಕರ್ತರೊಂದಿಗೆ ಮಾತನಾಡಿದ ಜೆಡಿಯು ನಾಯಕ ಕೆ.ಸಿ. ತ್ಯಾಗಿ, ಅಗ್ನಿಪಥ್ ಯೋಜನೆ ಮರು ಪರಿಶೀಲಿಸಬೇಕು ಎಂದು ನಾವು ಬೇಡಿಕೆ ಮುಂದಿಟ್ಟಿದ್ದೇವೆ. ಜಾತಿ ಗಣತಿ ವಿಷಯದ ಬಗ್ಗೆಯೂ ಆಗ್ರಹಿಸುತ್ತೇವೆ ಎಂದು ಹೇಳಿದ್ದಾರೆ.

ಜೆಡಿಯು ಲೋಕಸಭೆಯಲ್ಲಿ 12 ಸದಸ್ಯ ರನ್ನು ಹೊಂದಿದೆ. ಬಿಜೆಪಿ ಸ್ವಂತ ಬಲದ ಮೇಲೆ ಪೂರ್ಣ ಬಹುಮತ ಹೊಂದಿರದ ಕಾರಣ, ಸರ್ಕಾರ ನಡೆಸಲು ಮಿತ್ರ ಪಕ್ಷಗಳ ಅವಲಂಬಿಸಬೇಕಿದೆ.

## ಸೋಫ್ರೋಶೈನ್ ಶಾಲೆಯಲ್ಲಿ ಪರಿಸರ ದಿನ




ದಾವಣಗೆರೆ, ಜೂ.6- ಇಲ್ಲಿಗೆ ಸಮೀಪದ ತರಳಬಾಳು ನಗರದಲ್ಲಿನ ಸೋಫ್ರೋಶೈನ್ ಕಾನ್ಸೆಪ್ಟ್ ಶಾಲೆ ಹಾಗೂ ಕಾಲೇಜು ವತಿಯಿಂದ ಬುಧವಾರ ಗಿಡ ನೆಡುವ ಮೂಲಕ ಸಂಭ್ರಮದಿಂದ ವಿಶ್ವ ಪರಿಸರ ದಿನ ಆಚರಿಸಲಾಯಿತು. ಶಾಲೆಯ ಕಾರ್ಯದರ್ಶಿ ಡಾ.ಎಲ್. ಜಗದೀಶ್, ಪ್ರಾಚಾರ್ಯ ಸೈಮನ್, ಸಂಯೋಜಕಿ ಸುನೀತಾ ಸೈಮನ್, ಪಿಯು ಕಾಲೇಜಿನ ಪ್ರಾಚಾರ್ಯ ಭರತ್, ಶಿಕ್ಷಕರು, ಸಂಸ್ಥೆಯ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳಿದ್ದರು.

## ಹರಿಹರ ಸುತ್ತಮುತ್ತ ಇಂದು ವಿದ್ಯುತ್ ವ್ಯತ್ಯಯ

ಗುತ್ತೂರು, ಹಂಪಸಾಗರ ಕಾಂಪೌಂಡ್, ಹರಿಹರ ಟೌನ್, ಆಂಜನೇಯ, ಸಾರಥಿ, ದೀಟೂರು, ಗಂಗನರಸಿ ಈ ಫೀಡರ್ ವ್ಯಾಪ್ತಿಯಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

# ನೀಟ್ : ವಿಶ್ವಚೇತನ ವಿದ್ಯಾನಿಕೇತನ, ವಿದ್ಯಾಚೇತನ ವಸತಿಯುತ ಕಾಲೇಜುಗಳಿಗೆ ಉತ್ತಮ ಫಲಿತಾಂಶ



ದಾವಣಗೆರೆ, ಜೂ.6- ನಗರದ ವಿಶ್ವಚೇತನ ವಿದ್ಯಾನಿಕೇತನ / ವಿದ್ಯಾಚೇತನ ವಸತಿಯುತ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಯಾದ ಎಸ್.ಎನ್.ರಾಹುಲ್ ಅವರು, ರಾಷ್ಟ್ರ ಮಟ್ಟದ ವೈದ್ಯಕೀಯ ವೃತ್ತಿ ಶಿಕ್ಷಣಕ್ಕೆ ಸಂಬಂಧಿಸಿದ ನೀಟ್ - 2024 ಪರೀಕ್ಷೆಯಲ್ಲಿ 720 ಕ್ಕೆ 695 ಅಂಕಗಳನ್ನು ಪಡೆದು ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ.

ಹೆಚ್.ಎನ್ ನವೀನ್ 720ಕ್ಕೆ 685 ದ್ವಿತೀಯ ಸ್ಥಾನ, ಎಮ್.ಎಸ್. ಧನುಷ್ 720 ಕ್ಕೆ 665 ತೃತೀಯ ಸ್ಥಾನವನ್ನು ಪಡೆದಿದ್ದಾರೆ.

ಎಸ್.ಮಮತ : 646, ಸಿ.ಎಸ್.ಸೃಜನ್ : 643, ಎಸ್.ಸೂರ್ಯ : 640, ಎಸ್.ಸೃಜನ್ : 630, ಜಿ.ಎಸ್.ಮನೋಹರಿ : 626, ಆರ್. ಕಾರ್ತಿಕ್ : 623, ಪಿ.ಆಕಾಶ್ : 617, ವಿ.ಪ್ರೇರಣ : 616, ಜಾಕೀರ್ ಹುಸೇನ್ : 608, ತನ್ಮಯಿ ವಿ. ಕೊಟ್ಟೂರು : 602 ಹಾಗೆಯೇ ಇನ್ನೂ ಅನೇಕ ವಿದ್ಯಾರ್ಥಿಗಳು ಉತ್ತಮ ಅಂಕಗಳನ್ನು ಪಡೆದು ಕಾಲೇಜಿಗೆ ಕೀರ್ತಿಯನ್ನು ತಂದಿರುತ್ತಾರೆ.

ಪ್ರತಿ ವರ್ಷದಂತೆ ಈ ವರ್ಷವು ಕೂಡ ನಮ್ಮ ಕಾಲೇಜಿನ ಅನೇಕ ವಿದ್ಯಾರ್ಥಿಗಳು ವೈದ್ಯಕೀಯ ವೃತ್ತಿ ಶಿಕ್ಷಣಕ್ಕೆ ಆಯ್ಕೆಯಾಗಿದ್ದು, ವಿಶೇಷವೆಂದರೆ ಈ ಎಲ್ಲಾ ವಿದ್ಯಾರ್ಥಿಗಳು ಲಾಂಗ್ ಟರ್ಮ್ ಕೋಚಿಂಗ್ ಇಲ್ಲದೇ ತಮ್ಮ ಪ್ರಥಮ ಪ್ರಯತ್ನದಲ್ಲೇ ವೈದ್ಯಕೀಯ ಸೀಟು ಪಡೆದಿರುವುದು ಪ್ರಶಂಸೆಯ ವಿಷಯವಾಗಿದೆ.

ಈ ಎಲ್ಲಾ ವಿದ್ಯಾರ್ಥಿಗಳನ್ನು ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ವಿಜಯಲಕ್ಷ್ಮೀ ವೀರಮಾಚನೇನಿ, ಪ್ರಾಂಶುಪಾಲ ಜಿ.ವಿನೋದ್ ಮತ್ತಿತರರು ಅಭಿನಂದಿಸಿದ್ದಾರೆ.


**ಉಚಿತ ಚಿಕಿತ್ಸಾ ಶಿಬಿರ**

ಮುಖದಲ್ಲಿ ಮೊಡವೆ, ಅಲರ್ಜಿ, ತುರಿಕೆ, ದೇಹದಲ್ಲಿ ಗುಳ್ಳೆಗಳು, ಕೀವು ಇತ್ಯಾದಿ ಸೋಂಕಿನಿಂದ ನರಳುತ್ತಿದ್ದರೆ ನಮ್ಮಲ್ಲಿದೆ ಉಚಿತ ಸಂದರ್ಶನ ಹಾಗೂ ಔಷಧಿ ವಿತರಣಾ ಚಿಕಿತ್ಸಾ ಶಿಬಿರ.

**ಶಿಬಿರದ ದಿನಾಂಕ : 10.06.2024 ರಿಂದ 18.06.2024**

**ಸಮಯ : ಬೆಳಿಗ್ಗೆ 10 ರಿಂದ 2 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ : **ಅನ್ವಯ ಆಯುರ್ವೇದ ಚಿಕಿತ್ಸಾಲಯ**

#1288, 'ಹಂಜಿ ನಿಲಯ', 8ನೇ ಕ್ರಾಸ್, ತರಳಬಾಳು ಬಡಾವಣೆ, ದಾವಣಗೆರೆ.

**ಫೋ. : 636432 16644, 08192 452312**

ಈ ಚೀಟಿ ತೆಗೆದುಕೊಂಡು ಬಂದರೆ ಶೇ. 15 ರಷ್ಟು ಚಿಕಿತ್ಸೆಯಲ್ಲಿ ರಿಯಾಯಿತಿ ಇರುತ್ತದೆ



**WANTED**

At Maruti Suzuki Authorised Service Station, P.B Road Ranebennur in Haveri District, State. Karnataka, 581115

SERVICE ADVISOR : (NO 1)
Qualification- Diploma in Automobiles, Experience- 3 to 4 years

TECHNICIAN : (NO 3)
Qualification-Diploma,ITI Experience-3 to 4 years

ELECTRICIAN : (NO 2)
Qualification-Diploma, ITI Experience-3 to 4 years

TINKER/DENTER : (NO 1)
Qualification-Any Experience - 4 to 5 years

Relavant candidate can call below mentioned phone numbers to show their interest

9900922022, 9448486364

Email id-sudunaik@rediffmail.com


## ಸಾದರ ಸಾಧನಾ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಜೂ. 6 - ಸಾದರ ನೌಕರರ ಬಳಗ ಸಂಸ್ಥೆಯ ವತಿಯಿಂದ ಎಸ್ಸೆಸ್ಸೆಲ್ಸಿಯಲ್ಲಿ ಶೇ. 90 ಹಾಗೂ ಪಿಯುಸಿಯಲ್ಲಿ ಶೇ.85 ಕ್ಕಿಂತ ಅತಿ ಹೆಚ್ಚು ಅಂಕ ಪಡೆದ ಸಾದರ ವಿದ್ಯಾರ್ಥಿಗಳಿಗೆ ಸಾದರ ಸಾಧನಾ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಎಸ್ಸೆಸ್ಸೆಲ್ಸಿ (ಸಿಬಿಎಸ್‌ಇ) ಹಾಗೂ ರಾಜ್ಯ ಪಠ್ಯಕ್ರಮಕ್ಕೆ ಪ್ರತ್ಯೇಕವಾಗಿ ಮತ್ತು ಪಿಯುಸಿ (ಕಲಾ, ವಿಜ್ಞಾನ, ವಾಣಿಜ್ಯ) ವಿಭಾಗದಲ್ಲಿ ಅತಿ ಹೆಚ್ಚು ಅಂಕ ಪಡೆದ ಸಾದರ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಅರ್ಜಿಯನ್ನು ಕೆ. ನಾಗಪ್ಪ ಅಧ್ಯಕ್ಷರು, ಸಾದರ ನೌಕರರ ಬಳಗ, ಸಾದರ ಪತ್ತಿನ ಸಹಕಾರಿ ಸೌಹಾರ್ದ ಬ್ಯಾಂಕ್, # 2000/ಎ28, 16 ಬಿ ಕ್ರಾಸ್, ತರಳಬಾಳು ಬಡಾವಣೆ, ದಾವಣಗೆರೆ ಇಲ್ಲಿಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೊ: :9844501366, 9886339984 ಸಂಪರ್ಕಿಸಬಹುದಾಗಿದೆ.

# ದಾವಣಗೆರೆ ಸಂಗೀತ - ನೃತ್ಯ ಪರಿಷತ್ತಿನ ಅಧ್ಯಕ್ಷರಾಗಿ ಡಾ. ಮಂಗಳಾ ಶೇಖರ್



ದಾವಣಗೆರೆ, ಜೂ. 6 - ನಗರದಲ್ಲಿ ನೂತನವಾಗಿ ಸ್ಥಾಪನೆಯಾಗಿರುವ ದಾವಣಗೆರೆ ಸಂಗೀತ - ನೃತ್ಯ ಪರಿಷತ್ತಿನ ಅಧ್ಯಕ್ಷರಾಗಿ ವಿದುಷಿ ಡಾ. ಮಂಗಳಾ ಶೇಖರ್ ಆಯ್ಕೆಯಾಗಿದ್ದಾರೆ. ಮಂಗಳಾ ಶೇಖರ್ ಅವರು ಆಯುರ್ವೇದಿಕ್ ವೈದ್ಯೆಯಾಗಿದ್ದು, ತಮ್ಮ ಭರತಾಂಜಲಿ ಸಂಸ್ಥೆ ಅಡಿಯಲ್ಲಿ ಕಳೆದ ಎರಡೂವರೆ ದಶಕಗಳಿಂದ ದಾವಣಗೆರೆಯಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ನೃತ್ಯಾಭ್ಯಾಸ ನೀಡಿದ್ದು, ಸಂಸ್ಥೆ ವತಿಯಿಂದ ಸಾಕಷ್ಟು ಕಾರ್ಯಕ್ರಮ ನೀಡಿರುತ್ತಾರೆ.

ಇತ್ತೀಚೆಗೆ ಕುವೆಂಪು ಭವನದಲ್ಲಿ ಸಭೆ ಸೇರಿದ ಸಮಾನ ಮನಸ್ಕರು, ಸಂಗೀತ ಮತ್ತು ನೃತ್ಯಕ್ಕೆ ಜಿಲ್ಲೆಯಲ್ಲಿ ಸಂಘಟನೆಯ ಅಗತ್ಯವನ್ನು ಮನಗಂಡು ಒಕ್ಕೂಟ ಸ್ಥಾಪಿಸಲು ನಿರ್ಧರಿಸಿದರು. ಇದೇ ಸಂದರ್ಭದಲ್ಲಿ ಅಧ್ಯಕ್ಷ ಹಾಗೂ ಇನ್ನಿತರ ಪದಾಧಿಕಾರಿಗಳ ಆಯ್ಕೆಯನ್ನೂ ನಡೆಸಲಾಯಿತು. ಕಾರ್ಯದರ್ಶಿಯಾಗಿ ಶಾರದಾ ಸಂಗೀತ ಮತ್ತು ನೃತ್ಯ ವಿದ್ಯಾಲಯದ ಸಂಸ್ಥಾಪಕ ವಿದ್ವಾನ್ ರಾಜಗೋಪಾಲ ಭಾಗವತ ಅವರನ್ನು ಆಯ್ಕೆ ಮಾಡಲಾಗಿದೆ. ಖಜಾಂಚಿಯಾಗಿ ನಮನ ಅಕಾಡೆಮಿಯ ನೃತ್ಯ ಗುರು ಮಾಧವಿ ಡಿ.ಕೆ.ಅವರನ್ನು ಆಯ್ಕೆ ಮಾಡಲಾಗಿದೆ. ನಗರದಲ್ಲಿ ಕೆಲವು ದಶಕಗಳಿಂದ ಭರತನಾಟ್ಯ ಹಾಗೂ ಸಂಗೀತ ಶಿಕ್ಷಣ ನೀಡುತ್ತಿರುವ ನಾಟ್ಯಭಾರತಿ ಸಂಸ್ಥೆಯ ಪ್ರತಿನಿಧಿಯಾಗಿ ಶ್ರೀನಿಧಿ ಕುಲಕರ್ಣಿ ಅವರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ಆಯ್ಕೆಯಾದ ಸಂಘಟನಾ ಕಾರ್ಯದರ್ಶಿಗಳಾಗಿ ಗೋಪಾಲಕೃಷ್ಣ ಕೆ.ಎನ್, ರಾಜಶೇಖರ ಬೆನ್ನೂರು, ಸಹಕಾರ್ಯದರ್ಶಿಯಾಗಿ ಅನುಶ್ರೀ ಸಂಗೀತ ಶಾಲೆಯ ವಿದುಷಿ ವೀಣಾ ಹೆಗಡೆ, ಸಹ ಖಜಾಂಚಿಯಾಗಿ ಕಲಾಕಲ್ಪ ಸಂಸ್ಥೆಯ ಶುಭಾ ಐನಳ್ಳಿ ಅವರನ್ನು ಆಯ್ಕೆ ಮಾಡಲಾಯಿತು.

ನಿರ್ದೇಶಕ ಮಂಡಳಿಯಲ್ಲಿ ಚಿರಂತನ ಅಕಾಡೆಮಿಯ ಮಾಧವ ಪದಕಿ, ತಪಸ್ಯಾ ನೃತ್ಯ ಶಾಲೆಯವ ವಿದುಷಿ ಲಕ್ಷ್ಮೀ, ಮುರಳಿ ಘಟಿಕರ್, ರಾಜಶೇಖರ ಸಕ್ಕಟ್ಟು, ಸಲಹಾ ಮಂಡಳಿಯಲ್ಲಿ ಡಾ. ಎಚ್. ಬಿ. ಮಂಜುನಾಥ್, ಸದಾನಂದ ಹೆಗಡೆ, ರಾಷ್ಟ್ರೋತ್ಥಾನ ಶಾಲೆಯ ಜಯಣ್ಣ ಇತರರು ನಮನ ಅಕಾಡೆಮಿ ಅಧ್ಯಕ್ಷ ಗೋಪಾಲಕೃಷ್ಣ ಕೆ ಎನ್ ಉಪಸ್ಥಿತರಿದ್ದರು.


**ವಿದೇಶ ಪ್ರಯಾಣ ಶುಭ ಹಾರೈಕೆ**



**ನವೀನ ಟಿ.ಎಸ್.**

Lead Anti Fraud Specialist

ಇವರು ಎರಡನೇ ಬಾರಿಗೆ ಕಾರ್ಪೊರೇಟ್ ಬಿಸಿನೆಸ್ ಟ್ರಿಪ್‌ಗೆ ಪ್ಯಾರಿಸ್, ಫ್ರಾನ್ಸ್‌ಗೆ ದಿನಾಂಕ : 08.06.2024 ರಂದು ನವದೆಹಲಿಯಿಂದ ಫ್ರಾನ್ಸ್ ದೇಶಕ್ಕೆ ಪ್ರಯಾಣ ಬೆಳೆಸಲಿದ್ದಾರೆ. ಇವರ ಪ್ರಯಾಣ ಸುಖಕರವಾಗಿರಲೆಂದು ಶುಭ ಹಾರೈಸುವವರು

**ಡಾ. ಕೆ. ಸಿದ್ದಪ್ಪ,**

Physician, Retired Medicine Professor

**ಮತ್ತು ಕುಟುಂಬದವರು.**


# ಎನ್.ಡಿ.ಎ. ನಾಯಕರಾಗಿ ಮೋದಿ ಆಯ್ಕೆ ಇಂದು

**ಭಾನುವಾರ ಪ್ರಧಾನ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ**

ನವದೆಹಲಿ, ಜೂ. 6 – ನೂತನವಾಗಿ ಆಯ್ಕೆಯಾ ಗಿರುವ ಎನ್.ಡಿ.ಎ. ಮೈತ್ರಿಕೂಟದ ಸಂಸದರು ಶುಕ್ರವಾರ ಸಭೆ ನಡೆಸಿ ನರೇಂದ್ರ ಮೋದಿ ಅವರನ್ನು ನಾಯಕರನ್ನಾಗಿ ಆಯ್ಕೆ ಮಾಡಿಕೊಳ್ಳಲಿದ್ದಾರೆ. ನಂತರ ಅವರು ಮೂರನೇ ಬಾರಿ ಪ್ರಧಾನ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಭಾನುವಾರ ನಾಮಪತ್ರ ಸ್ವೀಕಾರ ಸಮಾರಂಭ ನಡೆಯುವ ಸಾಧ್ಯತೆ ಇದೆ. ಆಯ್ಕೆ ಸಭೆ ನಂತರ ಟಿ.ಡಿ.ಪಿ. ನಾಯಕ ಎನ್. ಚಂದ್ರಬಾಬು ನಾಯ್ಡು ಹಾಗೂ ಜೆಡಿಯು ನಾಯಕ ನಿತೀಶ್ ಕುಮಾರ್ ಅವರೊಂದಿಗೆ ಮೋದಿ ಜೊತೆಗೂಡಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡ ಲಿದ್ದಾರೆ. ಸಂಸದರು ಮೋದಿ ಬೆಂಬಲಿಸುವ ಪತ್ರವನ್ನು ಸಲ್ಲಿಸಿ ಸರ್ಕಾರ ರಚಿಸಲು ಅವಕಾಶ ಕೇಳಲಿದ್ದಾರೆ.

ವಾರಾಂತ್ಯದಲ್ಲಿ, ಬಹುತೇಕ ಭಾನುವಾರ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯಲಿದೆ. ಕೇಂದ್ರ ಸಂಪುಟದಲ್ಲಿ ಗೌರವಯುತ ಸ್ಥಾನ ನೀಡಬೇಕು ಎಂದು ಜೆಡಿಯು ಕೇಳುತ್ತಿದೆ. ಪಕ್ಷ ಮೂರು ಸ್ಥಾನಗಳನ್ನು ಕೇಳುತ್ತಿದೆ ಎನ್ನಲಾಗಿದೆ.













KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas